ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 13
ರೂ. 2.00

ಐಕ್ಯರಂಗ

26 ಮಾರ್ಚ್ 1995



ಕೇಂದ್ರದ ಬಜೆಟ್ ಜನವಂಚನೆಯ ಹಾದಿಯಲ್ಲಿ ಇನ್ನೊಂದು ಮೈಲಿಗಲ್ಲು! ಕೇಂದ್ರದ ಬಜೆಟ್

ಮಾರ್ಚ್ 10ರಂದು ಕೇಂದ್ರ ಹಣಕಾಸು ಮಂತ್ರಿಗಳು ಮಂಡಿಸಿದ ಬಜೆಟ್ ಒಂದೆಡೆ ಐಎಂಎಫ್-ವಿಶ್ವ ಬ್ಯಾಂಕ್‌ನ ಪಥ್ಯಗಳಿಗೆ, ಗ್ಯಾಟ್-1994ರ ಅಂಶಗಳಿಗೆ ಮಣಿಯುತ್ತಾ ಇನ್ನೊಂದೆಡೆ ಒಂದು ಚುನಾವಣಾ ವರ್ಷದಲ್ಲಿ ಅಗ್ಗದ ಜನಬೆಂಬಲ ಗಿಟ್ಟಿಸಲು ಮಾಡಿರುವ ಕಸರತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರವಾಗಿ ಟೀಕಿಸಿದೆ. ಸರಕಾರ ತನ್ನ ಜವಾಬ್ದಾರಿಯನ್ನು ಕೈಬಿಟ್ಟು ಹಣದುಬ್ಬರಕ್ಕೆ ಹಲವು ರೀತಿಯಲ್ಲಿ ಅವಕಾಶ ಮಾಡಿಕೊಡುವ, ಸ್ವಾವಲಂಬನೆಯ, ಸಾಮಾಜಿಕ ನ್ಯಾಯದ ಗುರಿಯನ್ನು ಮೂಲೆಗೊತ್ತಿರುವ ಬಜೆಟ್ ಇದು ಎಂದು ಪಿ.ಬಿ. ಹೇಳಿದೆ.

ದೇಶದ ಆರ್ಥಿಕದ ಅಭಿವೃದ್ಧಿಗೆ ಜೀವನಾಡಿಯಂತಿರುವ ಯೋಜನಾ ವೆಚ್ಚ ಇನ್ನು ಮುಂದೆ ಇಲ್ಲ ಎಂದೇ ಈ ಬಜೆಟ್ ಅಧಿಕೃತವಾಗಿ ಸಾರುವಂತಿದೆ. ಅಂದರೆ ಭಾರತದ ಜನತೆಗೆ ತನ್ನ ಆರ್ಥಿಕ, ಆ ಮೂಲಕ ಸಾಮಾಜಿಕ ಜವಾಬ್ದಾರಿಯನ್ನೇ ಸರಕಾರ ತ್ಯಜಿಸಿ ಬಿಡುವ ನೀತಿಯನ್ನೇ ಪೂರ್ಣವಾಗಿ ನರಸಿಂಹರಾವ್ ಸರಕಾರ ಅಂಗೀಕರಿಸಿದಂತಾಗಿದೆ ಎಂದು ಪೊಲಿಟ್ ಬ್ಯೂರೋ ಖಂಡಿಸಿದೆ. ರಾಜ್ಯಗಳು ಹಾಗೂ ಕೇಂದ್ರದ ಯೋಜನಾ ಖರ್ಚು ಕುರಿತಂತೆ 1994-95ರ ಪರಿಷ್ಕೃತ ಅಂದಾಜು ಹಾಗೂ 1995-96ರ ಬಜೆಟ್ ಅಂದಾಜುಗಳನ್ನು ಹೋಲಿಸಿದಾಗ ಇದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡರೆ ವಾಸ್ತವವಾಗಿ ಈ ವೆಚ್ಚವನ್ನು ಕಡಿಮೆಗೊಳಿಸಲಾಗಿದೆ ಎಂಬುದು ಸ್ಪಷ್ಟ. ಸರಕಾರದ ರೆವಿನ್ಯೂ ಖರ್ಚಿನಲ್ಲಿ ಹೆಚ್ಚಳವಾಗಿದ್ದರೆ ಅದು ಯೋಜನೇತರ ವೆಚ್ಚಕ್ಕಾಗಿಯೇ.

ಇಡೀ ಬಜೆಟ್ ಕಸರತ್ತೇ ಚುನಾವಣಾ ಬೆಂಬಲ ಗಿಟ್ಟಿಸುವ ಉದ್ದೇಶದಿಂದ ಕೂಡಿದೆ. ಸುಂಕ, ತೆರಿಗೆಗಳ ಇಳಿಕೆಯಿಂದ ಒಟ್ಟು ಆದಾಯದಲ್ಲಿ 1582 ಕೋಟಿ ರೂ. ಕಮ್ಮಿಯಾದರೂ ಯಾವುದೇ ತೆರಿಗೆಯ ಪ್ರಸ್ತಾಪ ಮಾಡದೆಯೂ ಶೇ. 5.5. ಹಣಕಾಸು ಕೊರತೆಯನ್ನಷ್ಟೇ ತೋರಿಸಲಾಗಿದೆ. ಹೆಚ್ಚಿನ ತೆರಿಗೆ ಆದಾಯ ವಸೂಲಿಯಾಗುತ್ತದೆ ಎಂಬ ವಿಶ್ವಾಸದಿಂದ ಹೀಗೆ ಮಾಡಲಾಗಿದೆ. ಕಳೆದ ವರ್ಷವೂ ಹೀಗೆಯೇ ಮಾಡಲಾಗಿತ್ತು. ಆದರಿಂದಾಗಿ ಶೇ 6 ಎಂದು ಅಂದಾಜು ಮಾಡಿದ್ದ ಕೊರತೆ ಶೇ. 6.7ಕ್ಕೇರಿತು. ಇದು ಸಣ್ಣ ಉಳಿತಾಯಗಳ ಹೆಚ್ಚಳದಿಂದಾದ ಏರಿಕೆ ಎಂಬ ಹಣಕಾಸು ಮಂತ್ರಿಗಳ ವಾದ ಅರ್ಥಹೀನ ಎಂದು ಹೇಳಿರುವ ಪೊಲಿಟ್ ಬ್ಯೂರೋ **ಈ ಬಾರಿಯೂ ಹಣಕಾಸು ಕೊರತೆ ಅಂದಾಜು ಮಾಡಿದ ಮಟ್ಟಕ್ಕಿಂತ ಮೇಲೇರಲಿದೆ, ಸರಕಾರ ಸದ್ಯದಲ್ಲೇ ಈ ಅಂತರ ತುಂಬಲು ತಾನೇ ಬೆಲೆಯೇರಿಸುವ ಕ್ರಮ ಕೈಗೊಳ್ಳುತ್ತದೆ, ಇದರಿಂದ ಈಗಾಗಲೇ ಎರಡಂಕಿ ದಾಟಿರುವ ಹಣದುಬ್ಬರ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹಾಕಲಿದೆ ಎಂದು ಪೊಲಿಟ್ ಬ್ಯೂರೋ ಆತಂಕ ವ್ಯಕ್ತಪಡಿಸಿದೆ.**

ಹಗರಣಗಳಲ್ಲಿ ಸೂರೆಗೊಂಡ ಅಪಾರ ಹಣದ ಬಗ್ಗೆ ಮೌನ

ಹಣಕಾಸು ಕೊರತೆ ತಗ್ಗಿಸುವ ಹೆಸರಲ್ಲಿ ಇನ್ನಷ್ಟು ಹೆಚ್ಚು ಸಾರ್ವಜನಿಕ ವಲಯದ ಶೇರುಗಳನ್ನು-ಸುಮಾರು 7000 ಕೋಟಿ ರೂಪಾಯಿವರೆಗಿನ ಸಾರ್ವಜನಿಕ ಆಸ್ತಿಯನ್ನು ಮಾರಲಾಯಿತು.ವಿವಿಧ ಹಗರಣಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ಹಾಕಲಾಗಿದೆ. ಆಶ್ಚರ್ಯಕರ ಸಂಗತಿಯೆಂದರೆ ಹಣಕಾಸು ಮಂತ್ರಿಗಳು ಈ ಬಗ್ಗೆ ಚಕಾರವೆತ್ತಿಲ್ಲ. ಈ ಹಣದಿಂದ ಹಣಕಾಸು ಕೊರತೆಯನ್ನು ಗಮನಾರ್ಹವಾಗಿ ತಗ್ಗಿಸಬಹುದಿತ್ತು ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಒಂದೆಡೆ ಸರಕಾರ ಹಣದುಬ್ಬರಕ್ಕೆ ಅನುಮತಿ ನೀಡಿದೆ, ಇನ್ನೊಂದೆಡೆ ಜನಗಳ ಆಹಾರ ಭದ್ರತೆ ಕಾಯ್ದುಕೊಳ್ಳಲು ಸಾಕಷ್ಟು ಕ್ರಮ ಕೈಗೊಳ್ಳುವ ಅಗತ್ಯವೇ ಇಲ್ಲ ಎಂದು ಅದು ಭಾವಿಸಿದಂತಿದೆ. ಆಹಾರ ಸಬ್ಸಿಡಿಯಲ್ಲಿ ಕೇವಲ 150 ಕೋಟಿ ರೂಗಳ ಹೆಚ್ಚಳವಾಗಿದೆ. ಹಣದುಬ್ಬರವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ವಾಸ್ತವವಾಗಿ ಆಹಾರ ಸಬ್ಸಿಡಿ ಕಳೆದ ವರ್ಷಕ್ಕಿಂತಲೂ ಕಮ್ಮಿಯಾಗುತ್ತದೆ. **ಹೀಗೆ ಒಂದೆಡೆ ಸಾಮಾಜಿಕ ನ್ಯಾಯದ ಬಗ್ಗೆ ನುಡಿಮುತ್ತುಗಳನ್ನುದುರಿಸುವ ಹಣಕಾಸು ಮಂತ್ರಿಗಳು ವಾಸ್ತವವಾಗಿ ತಮ್ಮ ಬಜೆಟ್ಟಿನಲ್ಲಿ ಮಾತ್ರ ದುಡಿಯುವ ಜನರ ಜೀವನವನ್ನು ಮತ್ತಷ್ಟು ದುರ್ಭರಗೊಳಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.**

ಬಜೆಟ್ಟಿನಲ್ಲಿ ನೀಡಿರುವ ಉದ್ಯೋಗ ಅಂಕೆ-ಸಂಖ್ಯೆ ಬಹಳ ಸಂಶಯಾಸ್ಪದ. ಕಣ್ಣಿಗೆ ಕಾಣುವ ವಾಸ್ತವತೆಯೆಂದರೆ ಉದ್ಯೋಗಾವಕಾಶ ಇಳಿಮುಖವಾಗುತ್ತಿದೆ. ಲಕ್ಷಾಂತರ ಉದ್ದಿಮೆಗಳು ಮುಚ್ಚುತ್ತಿರುವುದರಿಂದ ಹಾಗೂ ನೇಮಕಾತಿಗಳನ್ನು ನಿಲ್ಲಿಸಿರುವುದರಿಂದ.

ಐಎಂಎಫ್-ವಿಶ್ವ ಬ್ಯಾಂಕ್ ತತ್ವಗಳ ಗಿಣಿ ಪಾಠದಿಂದ ಮತ್ತಷ್ಟು ಹಣದುಬ್ಬರ

ಹೀಗೆ ಒಂದೆಡೆ ಯೋಜನಾ ವೆಚ್ಚಕ್ಕೆ ಸಾರ್ವಜನಿಕ ಹಣ ಹೂಡದಿರುವ ಸರಕಾರ ವಿದ್ಯುತ್, ರಸ್ತೆ, ಟೆಲಿಫೋನ್ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸಾಕಷ್ಟು ಬಂಡವಾಳ ಇಲ್ಲ ಎಂದು ಹಲುಬುವುದರಲ್ಲಿ ಆಶ್ಚರ್ಯವಿಲ್ಲ. ಮೂಲಭೂತ ಸೌಕರ್ಯಗಳನ್ನು ಬಳಸುವವರು ಅದರ ಖರ್ಚು ತೆರಬೇಕು ಎನ್ನುವ ಐಎಂಎಫ್-ವಿಶ್ವ ಬ್ಯಾಂಕ್ ತತ್ವವನ್ನು ಗಿಣಿಪಾಠ ಒಪ್ಪಿಸುವ ಸರಕಾರ ನಬಾರ್ಡ್(ರಾಷ್ಟ್ರೀಯ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ಹಾಗೂ ಹಣಕಾಸು ಸಂಸ್ಥೆಗಳ ಮೂಲಕ ಕೆಲವು ಕಣ್ಣೊರೆಸುವ

ಪುಟ 8 ನೋಡಿ

ವಿಧಾನಸಭಾ ಚುನಾವಣೆಗಳು

ಮತ್ತೊಮ್ಮೆ ಕಾಂಗ್ರೆ ನೀತಿಗಳಿಗೆ ಜನತೆಯ ತಿರಸ್ಕಾರ

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳ ಫಲಿತಾಂಶ ಮತ್ತೊಮ್ಮೆ ಜನತೆ ಒಟ್ಟಾರೆಯಾಗಿ ಕಾಂಗ್ರೆಸ್ಸಿನ ಆರ್ಥಿಕ ನೀತಿಗಳ ವಿರುದ್ಧ ಹಾಗೂ ಹೊಲಸು ಭ್ರಷ್ಟಾಚಾರದ ಕೃತ್ಯಗಳ ವಿರುದ್ಧ ತೀರ್ಪು ನೀಡಿದ್ದಾರೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.


ಕಾಂಗ್ರೆಸ್ಸಿನ ಆರ್ಥಿಕ ನೀತಿಗಳನ್ನು ತಾವು ತಿರಸ್ಕರಿಸುವುದಾಗಿ ಮತ್ತೊಮ್ಮೆ ಗುಜರಾತ್, ಮಹಾರಾಷ್ಟ್ರಗಳಲ್ಲಿ ತಿಳಿಯಪಡಿಸಿದ್ದಾರೆ. ಅದೇ ವೇಳೆಗೆ ಇಲ್ಲಿ ಕೋಮುವಾದಕ್ಕೆ ಬದ್ಧವಾದ ಬಿಜೆಪಿ, ಶಿವಸೇನೆಗಳ ಗೆಲುವು ದೇಶಕ್ಕೆ ಒಳ್ಳೆಯದಲ್ಲ ಎಂದೂ ಪೊಲಿಟ್ ಬ್ಯೂರೋ ಆತಂಕ ವ್ಯಕ್ತಪಡಿಸಿದೆ.

ಮಹಾರಾಷ್ಟ್ರ, ಗುಜರಾತ್ ಗಳಲ್ಲೂ ಕಾಂಗ್ರೆಸ್ ಜನರಿಂದ ಮತ್ತಷ್ಟು ದೂರವಾಗಿತ್ತು, ಆದರೆ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ವಿರೋಧವಿಲ್ಲದ್ದರಿಂದ ಕೋಮುವಾದಿ ಸಂಕುಚಿತವಾದಿ ಹಾಗೂ ಮೂಲಭೂತವಾದಿ ಶಕ್ತಿಗಳು ದೊಡ್ಡ ಲಾಭ ಗಳಿಸಿವೆ ಎಂದು ಫಲಿತಾಂಶಗಳ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಹೇಳಿದ್ದಾರೆ.

ಒರಿಸ್ಸಾದಲ್ಲಿ ಜನತಾದಳದ ಪರಾಭವದ ಬಗ್ಗೆ ಕೇಳಿದಾಗ ಅಲ್ಲಿರುವ ಮುಖ್ಯಮಂತ್ರಿ ಬಿಜು ಪಟ್ನಾಯಕ್ ಗೆ ಕಾಂಗ್ರೆಸ್ಸಿನ ನೀತಿಗಳ ಬಗ್ಗೆ ಏನೇನೂ ಭಿನ್ನಾಭಿಪ್ರಾಯವಿರಲಿಲ್ಲ, ಇದರಿಂದಾಗಿ ಅವರು ಬಹಳಷ್ಟು ಜನವಿಭಾಗಗಳಿಂದ ದೂರ ಸರಿದರು ಎಂದಿರುವ ಜ್ಯೋತಿ ಬಸುರವರು ಜನತಾದಳದಲ್ಲಿದ್ದ ಒಡಕಿನಿಂದಲೂ ಕಾಂಗ್ರೆಸ್ ಪೂರ್ಣ ಲಾಭ ಪಡೆದು ಒರಿಸ್ಸಾದಲ್ಲಿ ಅಧಿಕಾರ ಕಸಿದುಕೊಂಡಿದೆ ಎಂದರು.

ವಾರದ ವ್ಯಂಗ್ಯ ಚಿತ್ರ

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ವರ್ತಮಾನ ವಿಶ್ಲೇಷಣೆ

ಲಾಭದಾಯಕ ಸರ್ಕಾರಿ ಉದ್ದಿಮೆಗಳನ್ನು ಹೇಗೆ ನಾಶವಾಡಲಾಗುತ್ತಿದೆ

ಐಟಿಐನ ಉದಾಹರಣೆ ಮುಂದಿಟ್ಟಿದ್ದಾರೆ ದೂರಸಂಪರ್ಕ ನೌಕರರ ಸಂಘದ ಮುಖಂಡ ಕಾಂ. ವಿ.ಎ.ಎನ್.ನಂಬೂದರಿ

ಮಹಾತ್ಮಾ ಗಾಂಧೀಜಿ ಹುತಾತ್ಮರಾದ ದಿನ ಜನವರಿ 30, ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿ (ಐ.ಟಿ.ಐ)ಯಲ್ಲಿ ಕೆಲಸ ಮಾಡುವ ಸಾವಿರಾರು ನೌಕರರು ರಕ್ತದಲ್ಲಿ ಸಹಿ ಮಾಡಿ ಒಂದು ಮನವಿ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ಇವರಿಗೆ ಸಲ್ಲಿಸಿದರು. ಹೊಸ ದೂರಸಂಪರ್ಕ ನೀತಿ ದೇಶದ ಹಿತಕ್ಕೆ ಮಾರಕ, ಐಟಿಐಯಂತಹ ಸಾರ್ವಜನಿಕ ರಂಗದ ಉದ್ಯಮ ನಶಿಸಿ ಹೋಗುತ್ತಿದೆ, ಆದುದರಿಂದ ಸರ್ಕಾರವು ಈಗಿನ ಹೊಸ ನೀತಿಯನ್ನು ಬದಲಾಯಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಸ್ವಾತಂತ್ರ್ಯದ ನಂತರ ಮೊದಲ ಸಾರ್ವಜನಿಕ ರಂಗದ ಉದ್ಯಮ ಅಂದರೆ ಐಟಿಐ. ಇದು 1948ರಲ್ಲಿ ಪ್ರಾರಂಭವಾಯಿತು. ಮೊದಲ ಘಟಕವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ನಂತರ ನೈನಿ, ರಾಯಬರೇಲಿ, ಪಾಲಕ್ಕಾಡ್, ಶ್ರೀನಗರ, ಮಂಗಪುರ್‌ನಲ್ಲಿ, ದೂರಸಂಪರ್ಕ ಇಲಾಖೆಗೆ ಬೇಕಾಗುವ ಟೆಲಿಫೋನ್ ಮತ್ತು ಸ್ವಿಚ್ಚಿಂಗ್ ಸೂಕ್ಷ್ಮ ಉಪಕರಣಗಳನ್ನು ತಯಾರಿಸಿ ಇಲಾಖೆಗೆ ಸರಬರಾಜು ಮಾಡುತ್ತಿದೆ. ಈ ಉದ್ಯಮವು ದೂರಸಂಪರ್ಕ ಸಚಿವಾಲಯದ ನೇರ ಸಂಪರ್ಕದಲ್ಲಿದೆ. ಆಫ್ರಿಕಾ ಮತ್ತು ಏಶ್ಯಾ ಖಂಡಕ್ಕೂ ಕೂಡಾ ಉಪಕರಣಗಳು ರಫ್ತಾಗುತ್ತಿದ್ದು ಬಹಳಷ್ಟು ವಿದೇಶಿ ವಿನಿಮಯಗಳಿಸುತ್ತಿವೆ. ಐಟಿಐ ಒಂದು ಲಾಭದಾಯಕ ಉದ್ಯಮ.

ಈ ಸಂಸ್ಥೆಯು ಪ್ರತಿವರ್ಷ 3000 ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದೆ. ಶೇರು ಬಂಡವಾಳವಾಗಿ ಬಂದ ಹಣ 80 ಕೋಟಿಯನ್ನು ಸಂಪೂರ್ಣವಾಗಿ ತನ್ನ ಶೇರುದಾರರಿಗೆ ಪಾವತಿಸಿದೆ. 30,000 ನೌಕರರು ಈ ಸಂಸ್ಥೆಯಲ್ಲಿ ದುಡಿಯುತ್ತಿದ್ದಾರೆ.

ಹೊಸ ನೀತಿಯ ದುಷ್ಫಲ

ಸರ್ಕಾರದ ಹೊಸ ನೀತಿಯಿಂದಾಗಿ ಬಹುರಾಷ್ಟ್ರೀಯ ಕಂಪೆನಿಗಳು ಭಾರತದಲ್ಲಿ ಪ್ರವೇಶಿಸಲು ಮುಕ್ತ ಅನುಮತಿ ನೀಡಿರುವುದರಿಂದ ಬಹು ರಾಷ್ಟ್ರೀಯ ಕಂಪೆನಿಗಳು ದೇಶದ ತುಂಬೆಲ್ಲ ಹರಡಿರುವುದರಿಂದ ಈ ದೇಶೀಯ ಉದ್ಯಮ ಸೊರಗುತ್ತಿದೆ. ನಮ್ಮದೇ ಸಂಸ್ಥೆಯನ್ನು ಕಡೆಗಣಿಸಿ ವಿದೇಶೀ ಕಂಪೆನಿಗಳಿಗೆ ಉಪಕರಣ ಖರೀದಿ ಆರ್ಡರ್‌ಗಳೆಲ್ಲವೂ ಹೋಗುತ್ತಿವೆ. ಉದಾಹರಣೆ ಐಟಿಐ ಪ್ರತಿವರ್ಷ 3000 ಕೋಟಿ ವಾರ್ಷಿಕ ವಹಿವಾಟು ನಡೆಸುವ ಸಂಸ್ಥೆ. ಕಳೆದ ಎರಡು ವರ್ಷಗಳಿಂದ ಇಲಾಖೆಯ ಉಪಕರಣ ಬೇಡಿಕೆ ಬಹಳಷ್ಟು ಕಡಿಮೆಯಾಗಿದೆ. 1994-95ರಲ್ಲಿ ಸೆಪ್ಟೆಂಬರ್ ತನಕ 900 ಕೋಟಿ ರೂಪಾಯಿ ಉಪಕರಣಗಳ ಖರೀದಿ ಆರ್ಡರ್ ಗಳನ್ನಷ್ಟೆ ಸರ್ಕಾರ ನೀಡಿದೆ.

ಈ ವರ್ಷ (1995-96) ವಹಿವಾಟು 200 ಕೋಟಿ ರೂಪಾಯಿಗಿಂತ ಹೆಚ್ಚಾಗುವ ನಿರೀಕ್ಷೆ ಇಲ್ಲ.

1990-91 ರಲ್ಲಿ 7,77,826 ಟೆಲಿಫೋನ್ ಉತ್ಪಾನೆಯಾಗಿದೆ. 91-92ರಲ್ಲಿ 5, 17,400 ಟೆಲಿಫೋನ್ ಗಳ ಉತ್ಪಾದನೆಯಾಗಿದೆ. 92,93 ಮತ್ತು 94-95ಲ್ಲಿ ಇನ್ನಷ್ಟು ಕಮ್ಮಿಯಾಗಿದೆ.

ದೂರವಾಣಿ ಕೇಂದ್ರದ ಸ್ಥಾಪನೆಗೆ ಅಗತ್ಯವಾದ ಉಪಕರಣಗಳ ಸರಬರಾಜಿನಲ್ಲಿ ಈ ಮೊದಲು ಐಟಿಐ ದೇ ಸಿಂಹಪಾಲು. ಮುಕ್ತ ಆರ್ಥಿಕ ನೀತಿಯಿಂದಾಗಿ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳೇ ಈಗ ದೂರವಾಣಿಯ ಪ್ರಮುಖ ಉಪಕರಣಗಳ ಸರಬರಾಜಿನಲ್ಲಿ ಸಿಂಹಪಾಲು ಗಳಿಸುತ್ತಿವೆ. ಹಾಗಾಗಿ ಐಟಿಐ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಉದಾ. 1991-92 ರಲ್ಲಿ ಐಟಿಐ ಇಲಾಖೆಯಿಂದ ಸಿ-ಡಾಟ್ ಉಪಕರಣಗಳಿಗಾಗಿ (ಪೋರ್ಟ್ ಲೈನ್) 128 ಕೇಂದ್ರಗಳಿಗಾಗಿ ಬೇಡಿಕೆ ದೊರಕಿಸಿಕೊಂಡರೆ, ಅದಕ್ಕೆ ಎರಡು ವರ್ಷಗಳ ನಂತರ ಸರಬರಾಜು ಆರ್ಡರ್ ಸಿಕ್ಕಿದೆ. ವಿದೇಶೀ ಕಂಪನಿಯು ತಕ್ಷಣದಲ್ಲಿ 256(ಪೋರ್ಟ್ ಲೈನ್) ದೂರವಾಣಿ ಕೇಂದ್ರ ಉಪಕರಣ ಸರಬರಾಜಿಗೆ ಕೇವಲ ೨ ತಿಂಗಳಿನೊಳಗೆ ಬೇಡಿಕೆ ಗಳಿಸಿಕೊಂಡಿದೆ.

ಸರಕಾರವೇ 'ಮಲತಾಯಿ'

ಐಟಿಐ ಉಪಕರಣ ಸರಬರಾಜು ಮಾಡಿದ ನಂತರವೂ ದೂರವಾಣಿ ಇಲಾಖೆ ಹಣ ಪಾವತಿ ಮಾಡಲು ಮೀನಮೇಷ ಎಣಿಸುತ್ತದೆ. ಅದೇ ಖಾಸಗಿ ಕಂಪೆನಿಗಳಿಗೆ ತಕ್ಷಣವೇ ಹಣ ಮಂಜೂರು ಮಾಡುತ್ತದೆ.

ಉದಾ. ಐಟಿಐ ತಾನು ನೀಡಿದ ಉಪಕರಣಗಳಿಗಾಗಿ ಇಲಾಖೆ ಈ ವರೆಗೆ ರೂಪಾಯಿ 400 ಕೋಟಿ ಬಾಕಿ ಮಾಡಿದೆ. ಅದೇ ಖಾಸಗೀ ಕಂಪೆನಿಗೆ ತಕ್ಷಣ ಹಣ ಪಾವತಿ ಆದೇಶಗಳು ಹೊರಡುತ್ತವೆ.

ಸರ್ಕಾರದ ಹೊಸ ನೀತಿಯಿಂದಾಗಿ ದೇಶೀಯ ಸಾರ್ವಜನಿಕ ರಂಗದ ಉದ್ಯಮಗಳು ದೂರವಾಣಿಯ ಇಲಾಖೆಯ ಸಾಮಗ್ರಿ ಸರಬರಾಜಿನ ಟೆಂಡರುಗಳಲ್ಲಿ ಮುಂದಿನ ದಿನಗಳಲ್ಲಿ ಭಾಗವಹಿಸುವಂತಿಲ್ಲ, ವಿದೇಶೀ ಕಂಪೆನಿಗಳೊಂದಿಗೆ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ ನಮ್ಮ ಐಟಿಐ ಸಂಸ್ಥೆಗೆ ಇದ್ದು ಕಳೆದ 50 ವರ್ಷಗಳಿಂದ ಉಪಕರಣಗಳ ತಯಾರಿಕಾ ಅನುಭವವಿದ್ದು ಈ ಬಗ್ಗೆ 'ಸಂಶೋಧನಾ ಘಟಕವನ್ನೂ ಹೊಂದಿದೆ. ಎಲ್ಲಾ ಅರ್ಹತೆಗಳಿದ್ದೂ ಸರಕಾರ ಈ ಸಂಸ್ಥೆಯನ್ನು ಕಡೆಗಣಿಸಿ ವಿದೇಶೀ ಕಂಪೆನಿಗಳಿಗೆ ರತ್ನಗಂಬಳಿ ಹಾಸಿದೆ. ಹಾಗಾಗಿ ಈ ದೇಶೀಯ ಸಂಸ್ಥೆ ನಶಿಸುವ ಎಲ್ಲಾ ಸೂಚನೆಗಳು ಈಗ ಕಂಡು ಬರುತ್ತಿವೆ.

ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ದೇಶೀಯ ಉದ್ಯಮದಲ್ಲಿ ದೈತ್ಯ ಮುನ್ನಡೆಗಳಿಸಿ ದೇಶೀಯ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿ ಸ್ವಾವಲಂಬನೆಯ ಹರಿಕಾರನಾದ ದೇಶೀಯ ತಂತ್ರಜ್ಞಾನವು ಈಗ ವಿದೇಶೀ ಪರಾವಲಂಬನೆಗೆ ಬಲಿಯಾಗುತ್ತಿದೆ. ಹಾಗೂ ೫೦ ವರ್ಷಗಳ ಇತಿಹಾಸವುಳ್ಳ ಐಟಿಐ ನಂತಹ ಬೃಹತ್ ಉದ್ಯಮ ಅವನತಿಯೆಡೆಗೆ ಸಾಗುತ್ತಿದೆ. ಹೊಸ ಆರ್ಥಿಕ ನೀತಿಯ ಘೋರ ಪರಿಣಾಮದಿಂದಾಗಿ ಐಟಿಐ ನಂತಹ ಸ್ವದೇಶೀ ಉದ್ಯಮವು ನಾಶದ ಅಂಚಿನಲ್ಲಿ ಇದೆ.

ವಿಶ್ವಸಂಸ್ಥೆ ಸಮ್ಮೇಳನದ ಘೋಷಣೆ

ಮಹಿಳಾ ಅಸಮಾನತೆಯನ್ನು ನಿವಾರಿಸಬಲ್ಲುದೇ?

ರಾಷ್ಟ್ರೀಯ ಮಹಿಳಾ ಸಮಾವೇಶದ ಪ್ರಶ್ನೆ

ವಿವಿಧ ಮಹಿಳಾ ಸಂಘಟನೆಗಳು ಹಾಗೂ ರಾಜ್ಯಗಳನ್ನು ಪ್ರತಿನಿಧಿಸಿದ್ದ 280 ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಮಾವೇಶ ಫೆಬ್ರವರಿ ತಿಂಗಳ ಕೊನೆಯಲ್ಲಿ ದಿಲ್ಲಿಯಲ್ಲಿ ನಡೆಯಿತು. ಬೈಜಿಂಗ್‌ನಲ್ಲಿ ಸದ್ಯದಲ್ಲೇ ನಡೆಯಲಿರುವ ವಿಶ್ವಸಂಸ್ಥೆ ಮಹಿಳಾ ಸಮ್ಮೇಳನಕ್ಕೆಂದು ಭಾರತ ಸರ್ಕಾರದ ಪ್ರಬಂಧವನ್ನು ಬಲವಾಗಿ ಟೀಕಿಸಿದ ಈ ಸಮಾವೇಶ ಒಂಭತ್ತು ಪ್ರಮುಖ ಪ್ರಶ್ನೆಗಳನ್ನು ಕುರಿತಂತೆ ಪರ್ಯಾಯ ದಸ್ತಾವೇಜನ್ನು ಅಂತಿಮಗೊಳಿಸಿತು.

ಏಳು ಮಹಿಳಾ ಸಂಘಟನೆಗಳು -ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆ, ಅಖಿಲ ಭಾರತ ಮಹಿಳಾ ಸಮ್ಮೇಳನ, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಜಂಟಿ ಮಹಿಳಾ ಕಾರ್ಯಕ್ರಮ, ಮಹಿಳಾ ದಕ್ಷತಾ ಸಮಿತಿ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ ಹಾಗೂ ವೈ.ಡಬ್ಲ್ಯು.ಸಿ.ಎ. ಒಟ್ಟಾಗಿ ಈ ಸಮಾವೇಶವನ್ನು ಏರ್ಪಡಿಸಿದ್ದರು. ಹಲವಾರು ಶಿಕ್ಷಣಾ ತಜ್ಞರು, ಶಾಲಾ ಅಧ್ಯಾಪಕಿಯರು, ಅಂಗನವಾಡಿ, ಕಾರ್ಯಕರ್ತೆಯರು, ಗ್ರಾಮೀಣ ಕಾರ್ಯಕರ್ತೆಯರು, ವೈದ್ಯರುಗಳು, ವಕೀಲರು, ಆರ್ಥಿಕ ತಜ್ಞರು, ನಿವೃತ್ತ ಅಧಿಕಾರಿಗಳೂ ಇದರಲ್ಲಿ ಭಾಗವಹಿಸಿದರು.

ಈ ಕೆಳಗಿನ ಒಂಭತ್ತು ವಿಷಯಗಳ ಮೇಲೆ ಪ್ರಬಂಧಗಳನ್ನು ಅಂತಿಮಗೊಳಿಸಲಾಯಿತು.

1. "ಮಹಿಳೆಯರ ಮೇರಗೆ ಸಂರಚನಾ ಹೊಂದಾಣಿಕೆ"ಯ ನೀತಿಗಳ ಪ್ರಭಾವ
2. ಧಾರ್ಮಿಕ ಮೂಲಭೂತವಾದ, ಕೋಮುವಾದ ಮತ್ತು ಮಹಿಳೆ
3. ಮಹಿಳಾ ಮತ್ತು ರಾಜಕೀಯದಲ್ಲಿ ಭಾಗವಹಿಸುವಿಕೆ
4. ಮಾಧ್ಯಮ ಮತ್ತು ಮಹಿಳೆ
5. ಮಹಿಳೆಯರ ವಿರುದ್ಧ ಹಿಂಸಾಚಾರ
6. ಮಹಿಳೆ ಮತ್ತು ಕಾನೂನು
7. ಆರೋಗ್ಯ, ಜನಸಂಖ್ಯಾ ನೀತಿ ಮತ್ತು ಮಹಿಳೆ
8. ಕುಟುಂಬ
9. ಮಹಿಳೆ ಮತ್ತು ಶಿಕ್ಷಣ

ಈ ಎಲ್ಲಾ ಅಂಶಗಳ ಬಗ್ಗೆ ಶಿಫಾರಸುಗಳನ್ನು ಮಾರ್ಚ ಮೊದಲ ವಾರದಲ್ಲಿ ನ್ಯೂಯಾರ್ಕಿನಲ್ಲಿ ಸಭೆ ಸೇರುವ ಸಿದ್ಧತಾ ಸಮಿತಿಗೆ ಕಳಿಸಲಾಗುವುದು. ಈ ಪ್ರಬಂಧಗಳನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಲಾಗುವುದು ಎಂದೂ ಸಮಾವೇಶದ ಸಂಘಟಕರು ಹೇಳಿದ್ದಾರೆ.

ಮಹಿಳಾ ಸಂಘಟನೆಗಳ ಈ ಪ್ರಯತ್ನ ಎರಡು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಭಾರೀ ಮಹತ್ವ ಪೂರ್ಣ ಎಂದು ಹೇಳಲಾಗುತ್ತಿದೆ. ಮೊದಲನೆಯದಾಗಿ, ಸರಕಾರ ದೇಶದಲ್ಲಿ ಮಹಿಳಾ ಆಂದೋಲನದ ಘೋಷಣೆಗಳನ್ನು ತನ್ನ ಘೋಷಣೆಗಳೆಂಬಂತೆ ಚಿತ್ರಿಸಿ ಅದರ ಮರೆಯಲ್ಲಿ ಮಹಿಳೆಯರ ಸ್ಥಿತಿ-ಗತಿ ಹದಗೆಡುವಲ್ಲಿ ಸರಕಾರದ ನಿಷ್ಕ್ರಿಯತೆ, ಬೇಜವಾಬ್ದಾರಿತನವನ್ನು ಮುಚ್ಚಿಕೊಳ್ಳಲು ನಡೆಸಿರುವ ಪ್ರಯತ್ನ, ಎರಡನೆಯದಾಗಿ, ನಿಧಿಗಳನ್ನು ಒದಗಿಸುವ ಬಹುರಾಷ್ಟ್ರೀಯ ಸಂಸ್ಥೆಗಳು ತಮಗೆ ಬೇಕಾದ ಸಂಸ್ಥೆಗಳ ಜಾಲ ರಚಿಸಿ ಭಾರತೀಯ ಮಹಿಳಾ ಆಂದೋಲನ ಏನು ಮಾಡಬೇಕಾಗಿದೆ ಎಂಬುದನ್ನು ತಾವೇ ನಿರ್ಣಯಿಸಲು ನಡೆಸಿರುವ ಪ್ರಯತ್ನ. ಬಹುರಾಷ್ಟ್ರೀಯ ಸಂಸ್ಥೆಗಳ ಇಂತಹ ಪ್ರಯತ್ನಗಳಿಂದ ದೇಶದ ಮಹಿಳಾ ಆಂದೋಲನವನ್ನು ರಕ್ಷಿಸುವುದು ಕೂಡಾ ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಯ ಭಾಗ ಎಂದು ಈ ಸಮಾವೇಶ ಒತ್ತಿ ಹೇಳಿತು. ಅಮೇರಿಕಾದಂತಹ ಪ್ರಬಲ ಶಕ್ತಿಗಳು ವಿಶ್ವಸಂಸ್ಥೆಯನ್ನೇ ಹೈಜಾಕ್ ಮಾಡಿ, ಬುಡಮೇಲು ಮಾಡಲು ಹವಣಿಸುತ್ತಿರುವ ಸಂದರ್ಭದಲ್ಲಿ ಇದು ಬಹಳ ಮಹತ್ವಪೂರ್ಣ.

ಘೋಷಣೆ ಬಿಡುಗಡೆ

ಮಾರ್ಚ್ 7 ರಂದು ಏಳು ಮಹಿಳಾ ಸಂಘಟನೆಗಳು ಬೈಜಿಂಗ್ ಮಹಿಳಾ ಸಮ್ಮೇಳನ ಕುರಿತಂತೆ ಒಂದು ಘೋಷಣೆಯನ್ನು ಪ್ರಕಟ ಮಾಡಿವೆ.

"ನಾವು, ಮಹಿಳೆಯಗಾಗಿ, ಕಾರ್ಮಿಕರಾಗಿ, ಬೆಳೆಗಾರರಾಗಿ, ಬಳಕೆದಾರರಾಗಿ, ನಾಗರಿಕರಾಗಿ" ಎಂದೇ ಆರಂಭವಾಗುವ ಈ ಘೋಷಣೆ ಮಹಿಳಾ ಅಸಮಾನತೆ ಹಾಗೂ ದಾಸ್ಯದ ಪ್ರಶ್ನೆಯನ್ನು "ಅಭಿವೃದ್ಧಿಯ ಪ್ರಮುಖ ಧಾರೆಯಲ್ಲಿ ಮಹಿಳೆಯರನ್ನು ಸಮಗ್ರೀಕರಿಸಬೇಕು" ಎನ್ನುವ ಘೋಷಣೆಯ ಮೂಲಕ "ಪರಿಹರಿಸುವ" ವಿಶ್ವವ್ಯಾಪಿ ಪ್ರಯತ್ನದ ಮೂಲಭೂತ ತರ್ಕವನ್ನೇ ಪ್ರಶ್ನಿಸಿದೆ.

ಈ "ಅಭಿವೃದ್ಧಿಯ ಪ್ರಮುಖ ಧಾರೆ" ಕೆಲವರಿಗೆ ಅಭಿವೃದ್ಧಿಯ ಹಲವರಿಗೆ ಅನಭಿವೃದ್ಧಿಯ, ಕೆಲವರಿಗೆ ಶಾಂತಿಯ-ಹಲವರಿಗೆ ಹಿಂಸಾಚಾರದ ದಾರಿಯಷ್ಟೆ; ಇಂತಹ ದಾರಿಯಿಂದ ಮಹಿಳಾ ಹಿತಾಸಕ್ತಿಗಳ ರಕ್ಷಣೆಯಾಗುವುದಿಲ್ಲವಷ್ಟೇ ಅಲ್ಲ ಇಂತಹ ಪ್ರಬಲ ಹಿತಾಸಕ್ತಿಗಳ ಅಭಿವೃದ್ಧಿ ಮಾದರಿಯನ್ನು ಮಹಿಳಾ ಆಂದೋಲನ ತೆಪ್ಪಗೆ ಸ್ವೀಕರಿಸುವಂತೆ ಮಾಡುವುದೂ ಸಾಧ್ಯವಿಲ್ಲ ಎಂದು ಈ ಘೋಷಣೆ ಖಡಾಖಂಡಿತವಾಗಿ ಹೇಳಿದೆ. ಮಾರುಕಟ್ಟೆ ಮಾತ್ರವೇ ಮಾನವ ಅಸ್ತಿತ್ವವನ್ನು ನಿರ್ಣಯಿಸುವ ಏಕೈಕ ಪ್ರಜಾಪ್ರಭುತ್ವ ವಿಧಾನ ಎಂಬ ಸಿದ್ಧಾಂತವನ್ನು ಈ ಘೋಷಣೆ ತಿರಸ್ಕರಿಸಿದೆ. ರಾಷ್ಟ್ರೀಯ ಸಾರ್ವಭೌಮತೆಯ ಚೌಕಟ್ಟಿನಲ್ಲಿ ಮಾತ್ರವೇ ಮಹಿಳೆಯರು ತಮ್ಮ ಸ್ವಾತಂತ್ರ್ಯದ ಹಕ್ಕನ್ನು ಎತ್ತಿ ಹಿಡಿಯಲು ಸಾಧ್ಯ ಎಂದು ಒತ್ತಿ ಹೇಳುತ್ತಾ ಈಗ ಬೇಕಾಗಿರುವುದು "ಸಂರಚನಾ ಹೊಂದಾಣಿಕೆ"ಯಲ್ಲ, "ಸಂರಚನಾ ಪರಿವರ್ತನೆ" ಎಂದು ಒತ್ತಾಯಿಸಿದೆ.

ಬೈಜಿಂಗ್ ಸಮ್ಮೇಳನಕ್ಕೆ ಸಿದ್ಧಪಡಿಸಿದ ದಸ್ತಾವೇಜುಗಳು ಸತ್ವಹೀನವಾಗಿವೆ, ಏಕೆಂದರೆ ಮಹಿಳೆಯ ಸ್ಥಾನಮಾನಗಳು ಹದಗೆಡಲು ಮೂಲಕಾರಣಗಳನ್ನು ಅವು ಗುರುತಿಸಿಲ್ಲ, ಆದ್ದರಿಂದ ಕೇವಲ ಸದಭಿಪ್ರಾಯದ ಹೇಳಿಕೆಗಳಷ್ಟೇ ಆಗಿವೆ, ಈಗಿರುವ ವಿಶ್ವದ ಶ್ರೇಣಿಬದ್ಧ ಪ್ರಾಬಲ್ಯದ ಸನ್ನಿವೇಶಕ್ಕೆ ಅವು ಸವಾಲೊಡ್ಡುವುದಿಲ್ಲ ಎಂದು ಈ ಘೋಷಣಾ ಪತ್ರ ಸ್ಪಷ್ಟವಾಗಿ ಹೇಳಿದೆ.

ಈ ಹಿನ್ನೆಲೆಯಲ್ಲಿ ಘೋಷಣಾ ಪತ್ರ ರಾಷ್ಟ್ರೀಯ ಮಹಿಳಾ ಸಮಾವೇಶದ 13 ಅಂಶಗಳ ಶಿಫಾರಸನ್ನು ಮುಂದಿಟ್ಟಿದೆ. ಇವುಗಳ ಮುಖ್ಯ ಅಂಶಗಳು ಹೀಗಿವೆ.

- ಶ್ರಮಶಕ್ತಿ ಮತ್ತು ಪರಿಸರದ ಶೋಷಣೆಗೆ ಸಂಬಂಧಪಟ್ಟಂತೆ ಬಹುರಾಷ್ಟ್ರೀಯ ಕಂಪೆನಿಗಳ ಚಟುವಟಿಕೆಗಳನ್ನು ತಡೆಯಲು ವಿಶ್ವಸಂಸ್ಥೆ ಒಂದು ಉಸ್ತುವಾರಿ ವ್ಯವಸ್ಥೆ ಏರ್ಪಡಿಸಬೇಕು.
- ಮಹಿಳೆಯರ ಸ್ಥಾನ ಮಾನಗಳನ್ನು ಹೆಚ್ಚಿಸುವ ವಿಶ್ವಸಂಸ್ಥೆಯ ಕಾರ್ಯಕ್ರಮದ ಆಧಾರ ಭೂಸುಧಾರಣೆ ಮತ್ತು ಮಹಿಳೆಯರಿಗೆ ಜಮೀನು ಹಕ್ಕು ನೀಡುವುದಾಗಿರಬೇಕು. ಕೃಷಿಯಲ್ಲಿ ಮಹಿಳೆಯರ ಕೆಲಸ ಹಗುರವಾದ ಕೆಲಸ ಎಂಬ ಭಾವನೆ ಬಿಡುವ ಶಾಸನಗಳು ಬರಬೇಕು. ಮಹಿಳೆಯರಿಗೆ ಸಮಾನ ಕನಿಷ್ಠ ಕೂಲಿ ದುಡಿಯುವ ಮಹಿಳೆಯರಿಗೆ ಶಿಶುಪಾಲನಾ ಕೇಂದ್ರಗಳು ಹಾಗೂ ಹೆರಿಗೆ ಸೌಲಭ್ಯಗಳು.
- ಲಿಂಗಭೇದ ನಿವಾರಿಸಲು ಆರ್ಥಿಕ ಸ್ವಾತಂತ್ರ್ಯ ಅನಿವಾರ್ಯ ಎಂಬುದನ್ನು ಅರಿಯಬೇಕು.
- ಆಹಾರ ಸಬ್ಸಿಡಿ ಕೊನೆಗೊಳಿಸುವುದನ್ನು, ಕೃಷಿಯಲ್ಲಿರುವ ಭೂಮಿಯನ್ನು ಕೈಗಾರಿಕೆ ಹಾಗೂ ಇತರ ವಾಣಿಜ್ಯ ಬಳಕೆಗೆ ತರುವ ಸರಕಾರದ ನೀತಿಯನ್ನು ಬದಲಿಸಬೇಕು.
- ಮಹಿಳೆಯರಿಗೆ ಸರ್ವಸಾಮಾನ್ಯ ಆಸ್ತಿ ಸಂಪನ್ಮೂಲಗಳಲ್ಲಿ ಮೊದಲಿನಂತೆಯೇ ಅವಕಾಶವಿರಬೇಕು.
- ಕುಡಿಯುವ ನೀರು, ಶುಚಿತ್ವದ ಸೌಲಭ್ಯಗಳು ಹಾಗೂ ಎಲ್ಲರಿಗೂ ವಸತಿ ಮೂಲಭೂತ ಅಗತ್ಯಗಳನ್ನು ಪೂರೈಸುವುದೂ ಸರಕಾರಗಳ ಜವಾಬ್ದಾರಿಯಾಗಬೇಕು.
- ಎಲ್ಲಾ ಚುನಾಯಿತ ಸಂಸ್ಥೆಗಳಲ್ಲಿ ಶೇ. 33 ಮೀಸಲಾತಿ ಮೂಲಕ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದಕ್ಕೆ ಪ್ರೋತ್ಸಾಹ ನೀಡಬೇಕು.
- ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಲು ಪರಿಣಾಮಕಾರಿ ಕ್ರಮಗಳಿರಬೇಕು.
- ಸಂಘಟಿತ ಲೈಂಗಿಕ ಹಿಂಸಾಚಾರಕ್ಕೆ ಬಲಿಯಾಗುವ ಮಹಿಳೆಯರಿಗೆ ವಸತಿ ಮತ್ತು ಬದುಕಿಗಾಗಿ ವಿಶೇಷ ಶಾಸನಗಳು.
- ಒಂದು ಸಮಾನತಾ ಪೂರ್ಣ ಹಾಗೂ ಪ್ರಜಾಸತ್ತಾತ್ಮಕ ಕುಟುಂಬ ವ್ಯವಸ್ಥೆಯತ್ತ ಸಾಗಲು ಅನುವು ಮಾಡುವ ಶಾಸನಗಳು.
- ಮಹಿಳೆಯರಿಗೆ ಶಿಕ್ಷಣ -ಉಚ್ಚ ಶಿಕ್ಷಣ ಖಾಸಗೀ ಕೈಗಾರಿಕಾ ಗುಂಪುಗಳ ಹಣದ ಮೇಲೆ ಅವಲಂಬಿಸಿರಬಾರದು. ಈ ಮೂಲಕ ಮಹಿಳಾ ಅಧ್ಯಯನದಂತಹ ಕ್ಷೇತ್ರಗಳು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತಕ್ಕೊಳಗಾದಂತೆ ನೋಡಿಕೊಳ್ಳಬೇಕು.
- ಮಹಿಳೆಯರ ಆರೋಗ್ಯದ ಪ್ರಶ್ನೆಯನ್ನು ಜನಸಂಖ್ಯಾ ನಿಯಂತ್ರಣದ ಗುರಿಗಳೊಂದಿಗೆ ತಳಕು ಹಾಕಬಾರದು. ಸಾರ್ವತ್ರಿಕ ಆರೋಗ್ಯ ಸೌಲಭ್ಯ ಸರಕಾರದ ಜವಾಬ್ದಾರಿಯಾಗಿರಬೇಕು. ಖಾಸಗಿಯವರ ಮರ್ಜಿಗೆ ಅದನ್ನು ಬಿಡಬಾರದು.
- ಶಿಶು ಕೇಂದ್ರಗಳು, ವೃದ್ಧರು ನಿರಂತರ ಕಾಯಿಲೆ ಪೀಡಿತರು ಹಾಗೂ ಅನಾಥ ಮಹಿಳೆಯರ ಪಾಲನೆಯ ವ್ಯವಸ್ಥೆ ಮುಂತಾದವುಗಳು ವ್ಯಾಪಕವಾಗಿ ಸಿಗುವಂತಾಗಬೇಕು. ಈ ಮೂಲಕ ರಾಜಕೀಯ ವಲಯದಲ್ಲಿ, ಸಮುದಾಯ ಜೀವನದಲ್ಲಿ ಹಾಗೂ ಉತ್ಪಾದಕ ಶ್ರಮದಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಭಾಗವಹಿಸುವಂತಾಗಬೇಕು.

ಬಾಲ ಕಾರ್ಮಿಕರ ಸಮಸ್ಯೆ ಸಿಐಟಿಯು ಯೋಜನೆ

ಸಿಐಟಿಯು ರಾಷ್ಟ್ರಮಟ್ಟದಲ್ಲಿ ಬಾಲ ಕಾರ್ಮಿಕರ ಸಮಸ್ಯೆ ಪರಿಹಾರಗಳ ಬಗ್ಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ.)ಯ ಸಹಯೋಗದೊಂದಿಗೆ ಒಂದು ಯೋಜನೆಯನ್ನು ಕೈಗೆತ್ತಿಕೊಂಡಿದೆ. ಆ ರಾಜ್ಯಗಳಲ್ಲಿ ಇಟ್ಟಿಗೆ ಗೂಡು, ಬೀಡಿ, ಅಗರಬತ್ತಿ, ಹೋಟೆಲ್, ಕೈಮಗ್ಗ ಹಾಗೂ ಕಟ್ಟಡ ನಿರ್ಮಾಣ ಉದ್ದಿಮೆಗಳಲ್ಲಿ ಬಾಲಕಾರ್ಮಿಕರ ಸ್ಥಿತಿ-ಗತಿಗಳು, ಬಡತನ ನಿವಾರಣೆ, ಉದ್ಯೋಗಾವಕಾಶ ನಿರ್ಮಾಣ, ಪ್ರಕೃತಿ ಕಡ್ಡಾಯ ಶಿಕ್ಷಣ, ಅಗತ್ಯ ಆಧಾರಿತ ಕೂಲಿ, ಸಂಘಟಿತ ಹೋರಾಟ ಮಕ್ಕಳನ್ನು ಉದ್ಯೋಗಕ್ಕೆ ಹಚ್ಚುವುದರ ವಿರುದ್ಧ ಪ್ರಜ್ಞೆಯನ್ನು ಬೆಳೆಸಲು ಪ್ರಚಾರ ಕಾರ್ಯಕ್ರಮ ಈ ಯೋಜನೆಯಲ್ಲಿ ಸೇರಿದೆ.

ಕರ್ನಾಟಕದಲ್ಲಿ ಸಿಐಟಿಯು ರಾಜ್ಯ ಸಮಿತಿಯ ಉಸ್ತುವಾರಿಯಲ್ಲಿ ಹೋಟೆಲ್ ಮತ್ತು ರೆಸ್ಟೋರೆಂಟ್ ಉದ್ಯಮದಲ್ಲಿ ಬಾಲ ಕಾರ್ಮಿಕರ ಸ್ಥಿತಿ-ಗತಿ ಬಗ್ಗೆ ಈ ಯೋಚನೆ ಪರಿಶೀಲಿಸುತ್ತದೆ. ರಾಜ್ಯ ಸಿಟಿಐಯು ಪ್ರಧಾನ ಕಾರ್ಯದರ್ಶಿ ಈ ಯೋಜನೆಯಲ್ಲಿ ರಾಜ್ಯ ಸಂಯೋಜಕರಾಗಿದ್ದಾರೆ.

ಇದೇ ಏಪ್ರಿಲ್ 19,20,21, ರಂದು ದೆಹಲಿಯಲ್ಲಿ ಒಂದು ರಾಷ್ಟ್ರೀಯ ವರ್ಕ್ ಶಾಪ್ (ಕಮ್ಮಟ)ದೊಂದಿಗೆ ಈ ಯೋಜನೆ ಕಾರ್ಯಾರಂಭ ಮಾಡಲಿದೆ.

ಈ ಕಮ್ಮಟದಲ್ಲಿ ರಾಜ್ಯದಿಂದ ರಾಜ್ಯ ಸಂಯೋಜಕರಲ್ಲದೆ ಬೀಡಿ, ಕೈಮಗ್ಗ, ಅಗರಬತ್ತಿ ಹಾಗೂ ಹೋಟೆಲ್ ಉದ್ದಿಮೆಗಳಲ್ಲಿ ಕೆಲಸ ಮಾಡುವ ಒಬ್ಬೊಬ್ಬ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಇವರಲ್ಲಿ ಕನಿಷ್ಠ ಇಬ್ಬರು ಮಹಿಳೆಯರಿರುತ್ತಾರೆ. ಒಟ್ಟು ದೇಶದೆಲ್ಲೆಡೆಯಿಂದ ೫೦ ಮಂದಿ ಈ ಕಮ್ಮಟದಲ್ಲಿ ಭಾಗವಹಿಸುತ್ತಾರೆ.

ನಂತರ ಮೇ-ಜುಲೈ ತಿಂಗಳ ದೇಶದ ವಿವಿಧೆಡೆ ಉದ್ದಿಮೆವಾರು ರಾಷ್ಟ್ರೀಯ ಕಮ್ಮಟಗಳು ನಡೆಯುತ್ತವೆ. ಹೋಟೆಲ್ ಉದ್ದಿಮೆಯಲ್ಲಿ ಬಾಲಕಾರ್ಮಿಕರನ್ನು ಕುರಿತಂತೆ ಕರ್ನಾಟಕದಲ್ಲಿ ಜೂನ್ 1995ರಲ್ಲಿ ಇಂತಹ ಕಮ್ಮಟ ನಡೆಯಲಿದೆ. ವಿ.ಜೆ.ಕೆ. ನಾಯರ್ ಈ ಕಮ್ಮಟದ ಕಾರ್ಯಕ್ರಮ ಸಂಯೋಜಕರಾಗಿರುತ್ತಾರೆ. ಈ ಕಮ್ಮಟಗಳು 3 ದಿನ ನಡೆಯುತ್ತವೆ. ಒಟ್ಟು 25 ಕಾರ್ಯಕರ್ತರು ಭಾಗವಹಿಸುತ್ತಾರೆ.

ನಂತರ 14 ರಾಜ್ಯಗಳಲ್ಲಿ ರಾಜ್ಯ ಮಟ್ಟದ ಕಮ್ಮಟಗಳು ನಡೆಯುತ್ತವೆ. ಕರ್ನಾಟಕದಲ್ಲಿ ಇದು ಜುಲೈ 1995 ರಲ್ಲಿ ನಡೆಯಲಿದೆ. ಇದೂ 3 ದಿನಗಳು ನಡೆಯಲಿದ್ದು ಒಟ್ಟು 50 ಮಂದಿ ಭಾಗವಹಿಸುತ್ತಾರೆ. ಇದರೊಂದಿಗೆ ಈ ಯೋಜನೆಯ ಮೊದಲ ಹಂತ ಮುಗಿಯುತ್ತದೆ.

ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಒಂದು ಸಿಐಟಿಯು ರಾಷ್ಟ್ರೀಯ ಸಮಿತಿ ರಚನೆಗೊಂಡಿದ್ದು ಈ ಸಮಿತಿ ಬಾಲಕಾರ್ಮಿಕರ ಸಮಸ್ಯೆ ಕುರಿತು ಪೋಸ್ಟರ್‌ಗಳನ್ನು ಹಾಗೂ ನಾಲ್ಕು ವಿಡಿಯೋ ಚಿತ್ರಗಳನ್ನು ತಯಾರಿಸಲಾಗಿದೆ. ಪೋಸ್ಟರು ರಚನೆ ಕುರಿತಂತೆ ಒಂದು ಸ್ಪರ್ಧೆ ನಡೆಸಲಾಗುತ್ತದೆ. (ಬಾಕ್ಸ್ ನೋಡಿ)

ಬಾಲ ಕಾರ್ಮಿಕರ ಸ್ಥಿತಿ-ಗತಿ, ಅದರ ಕಾರಣಗಳನ್ನು ನಿರ್ಮೂಲನದ ಬಗ್ಗೆ ಘೋಷಣೆಗಳನ್ನು ರಾಜ್ಯಗಳಿಂದ ಹಾಗೂ ಉದ್ದಿಮೆಗಳಿಂದ ರಾಷ್ಟ್ರೀಯ ಸಮಿತಿ ಆಹ್ವಾನಿಸಿದೆ.

ಬಾಲ ಕಾರ್ಮಿಕರನ್ನು ಕುರಿತಂತೆ ಸಿಐಟಿಯು ರಾಷ್ಟ್ರೀಯ ಸಮಿತಿ ಈ ವಿಷಯದ ಮೇಲೆ ಪೋಸ್ಟರುಗಳನ್ನು ಮುದ್ರಿಸಲಿದೆ. ಈ ಪೋಸ್ಟರುಗಳ ವಿನ್ಯಾಸ ಮಾಡುವ ಒಂದು ಸ್ಪರ್ಧೆಯನ್ನು ಅದು ಏರ್ಪಡಿಸಿದೆ. ಅದರ ವಿವರಗಳು ಹೀಗಿವೆ.

1. ಪುಟ್ಟ ಬಾಲಕ/ಬಾಲಕಿಯರು ದುಡಿಮೆಗೆ ಇಳಿಯಬೇಕಾದ ಪರಿಸ್ಥಿತಿ, ಅದರ ವ್ಯಾಪಕತೆ ಹಾಗೂ ಬಡತನ ನಿವಾರಣೆಯ ಅಗತ್ಯದ ಬಗ್ಗೆ ಪೋಸ್ಟರುಗಳನ್ನು ವಿನ್ಯಾಸಗೊಳಿಸಬೇಕಾಗಿದೆ.
2. ಮೂವರು ತೀರ್ಪುಗಾರರಿರುವ ಒಂದು ತೀರ್ಪು ಸಮಿತಿಯನ್ನು ನೇಮಿಸಲಾಗುವುದು.
3. ಮೊದಲ ಬಹುಮಾನ ರೂ. 5000/-
   ಎರಡನೇ ಬಹುಮಾನ 3000/-
   ಮೂರನೇ ಬಹುಮಾನ 1000/-
4. ಮೇ 25, 1995ರಂದು ಕಲ್ಕತ್ತೆಯಲ್ಲಿ ಸಿಐಟಿಯುವಿನ 25ನೇ ವಾರ್ಷಿಕೋತ್ಸವದಂದು ಬಹುಮಾನ ವಿತರಣೆ ನಡೆಯಲಿದೆ. ಬಹುಮಾನ ವಿಜೇತರಿಗೆ ಕಲ್ಕತ್ತೆಗೆ ಬಂದು ಹೋಗಲು ಎರಡನೇ ದರ್ಜೆ ರೈಲ್ವೆ ಟಿಕೇಟು ಖರ್ಚು ನೀಡಲಾಗುವುದು.
5. ಮೇ 27ರಿಂದ ಕಲ್ಕತ್ತೆಯಲ್ಲಿ ನಡೆಯಲಿರುವ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ವೇಳೆಗೆ ಎಲ್ಲಾ ಪೋಸ್ಟರುಗಳನ್ನು ಪ್ರದರ್ಶಿಸಲಾಗುವುದು.
6. ಕಲಾವಿದರು ತಮ್ಮ ಪೋಸ್ಟರನ್ನು 20"X30" ಅಳತೆಯಲ್ಲಿ ಬಹುವರ್ಣದಲ್ಲಿ ಅಥವಾ ಏಕವರ್ಣದಲ್ಲಿ ರಚಿಸಬಹುದು.
7. ಇವು ಏಪ್ರಿಲ್ 30, 1995ರೊಳಗೆ ಸಿಐಟಿಯು ಕೇಂದ್ರವನ್ನು ತಲುಪಬೇಕು.



ಬೀದರ್: ನಾಗರಿಕ ಕ್ರಿಯಾ ಸಮಿತಿ ಚಳುವಳಿಗೆ ಜಯ

ಬೀದರ್ ನಗರದಲ್ಲಿ ಬಸ್ ನಿಲ್ದಾಣ ಬದಲಾವಣೆ ವಿರುದ್ಧ ನಾಗರಿಕರ ಕ್ರಿಯಾ ಸಮಿತಿ ನಡೆಸಿದ ಚಳುವಳಿ ಯಶಸ್ವಿಯಾಗಿದೆ. ಹೊಸ ಬಸ್ ನಿಲ್ದಾಣವಾದ ನಂತರ ಬಸ್ಸುಗಳೆಲ್ಲಾ ಹಳೆ ನಿಲ್ದಾಣಕ್ಕೆ ಬರದ್ದರಿಂದ ನಾಗರಿಕರಿಗೆ ತುಂಬಾ ತೊಂದರೆಯಾಗಿತ್ತು. ಆದ್ದರಿಂದ ಇದನ್ನು ವಿರೋಧಿಸಿ ನಾಗರಿಕರು ಕ್ರಿಯಾ ಸಮಿತಿ ರಚಿಸಿಕೊಂಡು ಫೆಬ್ರವರಿ ೨೦ ರಂದು ಮೆರವಣಿಗೆ, ಬಸ್ ತಡೆ ಚಳುವಳಿ ನಡೆಸಿದರು. ಮಾರನೇ ದಿನದಿಂದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸರದಿ ಉಪವಾಸ ಆರಂಭವಾಯಿತು. ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವ ಮಿರಾಜ ಪಟೇಲರು ಮಧ್ಯ ಪ್ರವೇಶಿಸಿದರೂ ಸತ್ಯಾಗ್ರಹ ನಿಲ್ಲಲಿಲ್ಲ. ಸಚಿವರು ಸತ್ಯಾಗ್ರಹ ಶಿಬಿರಕ್ಕೆ ಬಂದು ಕ್ರಿಯಾ ಸಮಿತಿಯ ಬೇಡಿಕೆಗಳನ್ನು ಜ್ಯಾರಿಗೊಳಿಸುವುದಾಗಿ ಘೋಷಿಸಿದ ನಂತರವೇ ಎಲ್ಲರ ಸಮಕ್ಷಮ ಒಪ್ಪಂದ ಪತ್ರವನ್ನು ಓದಿ ಹೇಳಿದ ಮೇಲೆಯೇ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ಕ್ರಿಯಾ ಸಮಿತಿಯ ಸಂಚಾಲಕರಾದ ಎಂ.ಎ. ಜಬ್ಬಾರ, ಅಧ್ಯಕ್ಷರಾದ ರಮೇಶ್ ಪಾಂಡೆ, ಕಾರ್ಯದರ್ಶಿ ನಾರಾಯಣರಾವ್ ಮನ್ನಳ್ಳಿ ಹಾಜರಿದ್ದರು.

ಮೈಸೂರಿನಲ್ಲಿ ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಲು ಧರಣಿ

ಜೆ ಎಲೆಕ್ಟ್ರಿಕಲ್ ಕಾರ್ಖಾನೆ ಸೇರಿದಂತೆ ಮೈಸೂರಿನಲ್ಲಿ ಮುಚ್ಚಿರುವ ಎಲ್ಲಾ ಕಾರ್ಖಾನೆಗಳನ್ನು ತೆರೆಯುವಂತೆ ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿಯ ಕರೆಯಂತೆ ಮಾರ್ಚ್ 8 ರಂದು ಸಹಾಯಕ ಕಾರ್ಮಿಕ ಆಯುಕ್ತ ಕಛೇರಿಯ ಮುಂದೆ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯುವರೆವಿಗೆ ಧರಣಿ ಸತ್ಯಾಗ್ರಹ ಯಶಸ್ವಿಯಾಗಿ ನಡೆಯಿತು.

ಹೋಟೆಲ್ ನೌಕರರ ಸಂಘದ ಎ.ವಿ. ಪುಟ್ಟಣ್ಣ, ಸಿಐಟಿಯು ಕಾರ್ಯದರ್ಶಿ ಮೋಹನ್ ಕುಮಾರ್, ವಿಮಾ ನೌಕರರ ಸಂಘದ ಎಂ.ಎಸ್. ಪ್ರಭಾಕರ್, ಜಿಲ್ಲಾ ಟೆಕ್ಸ್‌ಟೈಲ್ ಸಂಘದ ಶಾಂತಪ್ಪ ಇವರಲ್ಲದೆ ಹಲವಾರು ಕಾರ್ಮಿಕ ಸಂಘಗಳ ಮುಂದಾಳುಗಳು, ಹುಣಸೂರು, ನಂಜನಗೂಡು, ಕಡಕೊಳದಿಂದ ಕಾರ್ಮಿಕರು ಭಾಗವಹಿಸಿದ್ದರು. ಪ್ರಮುಖವಾಗಿ ಜೆ. ಎಲೆಕ್ಟ್ರಿಕಲ್ ಮಹಿಳಾ ಕಾರ್ಮಿಕರಾದಿಯಾಗಿ ಇತರೇ ಕಾರ್ಮಿಕರು ಭಾಗವಹಿಸಿದರು.

ಧರಣಿ ಮುಷ್ಕರದ ಅಂಗವಾಗಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಎಂ.ಎನ್. ಉಗ್ರಪ್ಪನವರು ಸಹಾಯಕ ಆಯುಕ್ತರ ವಶಕ್ಕೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಿರುವ ಮನವಿಯನ್ನು ಕೊಟ್ಟು ಮಾತನಾಡಿದರು.

ಆನಂತರ ಕಾಂ. ಎಂ.ಎನ್. ಉಗ್ರಪ್ಪನವರು ಮಾತನಾಡಿ ಕಾರ್ಮಿಕ ವರ್ಗ ಸಂಘಟನೆಯಲ್ಲಿ ಇದು ಈಗ ಮುಖ್ಯ ಘೋಷಣೆ ಅದಕ್ಕಾಗಿ ಎಲ್ಲರೂ ಶ್ರಮಿಸಬೇಕೆಂದು ಮನವಿ ಮಾಡಿಕೊಂಡರು.

STATEMENT ABOUT OWNERSHIP ETC., OF THE WEEKLY NEWSPAPER "AIKYARANGA"

FORM IV
(See Rule 8)

1. Place of Publication	: 12, 18th cross, Thanappa Gardens, S.R.Nagar, Bangalore-560 027
2. Periodicity of Publication	: Weekly
3. Printers Name	: P.Ramachandra Rao
(Wther Citizen in India)	: Yes
(If Foreigner, state the country of origin)	:
(Address)	: 12, 18th Cross, S.R.Nagar, Bangalore-27
4. Publishers Name	: P.Ramachandra Rao
Wther Citizen in India)	: Yes
(If Foreigner, state the country of origin)	:
Address	: 12, 18th Cross, S.R.Nagar, Bangalore-27
5. Editor's Name	: P.Ramachandra Rao
Wther Citizen in India)	: Yes
(If Foreigner, state the country of origin)	
Address	: 12, 18th Cross, S.R.Nagar, Bangalore-27
6. Name and Address of individual who own the newspaper and Partner or Share holders more than one percent of the Capital	: Karnataka State Committee, Communist Party of India(Marxist), No. 12, 18th Cross, S.r.Nagar, Bangalore-27

I, P.Ramachandra Rao, hereby declare that the particulars given below are true to the best of my knowledge and belief.

Date: 17th March 1995

Sd/-
P.Ramachandra Rao
Signature of Publisher


ಕನಿಷ್ಠ ಕೂಲಿ ಮತ್ತು ವಿರಿಳಿತ ತುಟ್ಟಿಭತ್ಯೆ ಹೆಚ್ಚಳಕ್ಕೆ ಎಂ.ಪಿ.ಎಂ. ಅರಣ್ಯ ನೌಕರರ ಸಮಾವೇಶ ಆಗ್ರಹ

ಶಿವಮೊಗ್ಗ: ಜಿಲ್ಲಾ ಎಂ.ಪಿ.ಎಂ. ಅರಣ್ಯ ನೌಕರರ ಸಮಾವೇಶವು ಮಾರ್ಚ್ 5ರಂದು ತೀರ್ಥಹಳ್ಳಿಯಲ್ಲಿ ನಡೆಯಿತು. ಸಮಾವೇಶದ ಉದ್ಘಾಟನೆಯನ್ನು ನೆರವೇರಿದ ಸಿಐಟಿಯುವಿನ ಅಖಿಲ ಭಾರತ ಉಪಾಧ್ಯಕ್ಷರು ಹಾಗೂ ಸಿಐಟಿಯುವಿನ ಕರ್ನಾಟಕ ರಾಜ್ಯದ ಅಧ್ಯಕ್ಷರು ಆದ ಕಾಂ. ಎಸ್. ಸೂರ್ಯನಾರಾಯಣ ರಾವ್ ರವರು ಮಾತನಾಡುತ್ತಾ ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರು ಬಹಳ ಕಡಿಮೆ ಕೂಲಿಗಾಗಿ ದುಡಿಯುತ್ತಾ ಇದ್ದಾರೆ, ಇವರಿಗೆ ಸರಕಾರ ಕನಿಷ್ಠ ಕೂಲಿ ನಿಗದಿ ಮಾಡಲು ಸಂಘಟಿತರಾಗಿ ಹೋರಾಟ ನಡೆಸುವಲ್ಲಿ ಅರಣ್ಯ ಕಾರ್ಮಿಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಹೇಳಿದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಜನತಾದಳ ಸರಕಾರವು ಈ ಹಿಂದಿನ ಕಾಂಗ್ರೆಸ್ (ಐ) ಸರಕಾರ ಮಾಡಿದ ಹಾಗೆ ಭರವಸೆ ಕೊಟ್ಟು ತಪ್ಪಿಸಿಕೊಳ್ಳದಂತೆ ಎಚ್ಚರಿಸಬೇಕಾಗಿದೆ ಎಂದೂ ಕಾಂ. ಸೂರಿ ಹೇಳಿದರು.

ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು, ಈ ಸಮಾಜದಲ್ಲಿ ಶಾಂತಿ ಹಾಗೂ ದೇಶದ ಐಕ್ಯತೆ ಮತ್ತು ಸಮಗ್ರತೆ ರಕ್ಷಿಸಿ ಬೆಳೆಸಲು ಕಾರ್ಮಿಕ ವರ್ಗ ರಾಜಕೀಯವಾಗಿ ಐಕ್ಯ ಹೋರಾಟ ನಡೆಸಲು ಮುಂದಾಗಬೇಕೆಂದು ಅವರು ಕರೆ ನೀಡಿದರು.

ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಕಾಂ.ಸಿ. ನಂಜುಂಡಪ್ಪನವರು ಸಮಾವೇಶವನ್ನುದ್ದೇಶಿಸಿ ಮಾತನಾಡಿ ಕಾರ್ಮಿಕ ವರ್ಗದ ರಾಜಕೀಯ ಹಾಗೂ ವರ್ಗ ಹೋರಾಟದ ಮಹತ್ವದ ಕುರಿತು ವಿವರಿಸಿದರು.

ಆನಂತರ ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಯವರಾದ ಕಾಮ್ರೇಡ್ ಕೆ. ಶಂಕರ್ ಹಾಗೂ ಶಿವಮೊಗ್ಗ ಜಿಲ್ಲಾ ಕಾರ್ಮಿಕ ರೈತ ಮುಂದಾಳು ಕಾಂ. ಶಿವಶಂಕರ್ ಮಾತನಾಡಿ ಸಂಘಟನೆ ಮತ್ತು ಹೋರಾಟ ನಡೆಸಲು ಕಾರ್ಮಿಕರು ಜವಾಬ್ದಾರಿಯುತವಾಗಿ ಶಿಸ್ತಿನಿಂದ ನಡೆಯಬೇಕೆಂದರು. ಎಂ.ಪಿ.ಎಂ. ಕಾರ್ಮಿಕರ ಮುಖಂಡ ಕಾಂ. ಜಿ. ರಮೇಶ್ ರವರು ಮಾತನಾಡಿ ಬೇಡಿಕೆಗಳಿಗಾಗಿ ಕಾರ್ಮಿಕರು ಸಂಘಟಿತ ಹೋರಾಟವನ್ನು ನಡೆಸಲು ಮುಂದಾಗಬೇಕೆಂದರು. 17 ಮಂದಿಯ ಕಾರ್ಯಕಾರಿ ಸಮಿತಿ ರಚಿಸಿ ನೂತನ ಕಾರ್ಯದರ್ಶಿಯಾಗಿ ಕೆ.ಜಿ. ಗಿರಿಯಪ್ಪ ಹಾಗೂ ಅಧ್ಯಕ್ಷರಾಗಿ ಎ.ಪಿ. ದ[illegible]ಗ್ಗಪ್ಪನವರನ್ನು ಸಮಾವೇಶದಲ್ಲಿ [illegible] ಆರಿಸಲಾಯಿತು. ಕೊನೆಗೆ [illegible]ನೂತನ ಕಾರ್ಯದರ್ಶಿಯವರು [illegible]ಭಿನಂದನೆ ಸಲ್ಲಿಸಿದರು.



ಬೆಳವಣಿಗೆಯ ಬಜೆಟ್ಟಂತೆ! ಯಾರ ಬೆಳವಣಿಗೆಗೆ?

ಮುಂದಿನ ವರ್ಷ ಬಡವರು ದಿನಕ್ಕೆಷ್ಟು ಉಣ್ಣಬೇಕು, ಉಣ್ಣಬೇಕೋ ಬೇಡವೋ ಎಂಬುದನ್ನು ಹೇಳುವ ಬಜೆಟ್ ಬಂದಿದೆ. ಬೇರೆ ಬೇ ವರ್ಗದ ಜನ ಬೇರೆ ಬೇರೆ ರೀತಿಯಲ್ಲಿ ಈ ಬಜೆಟ್ಟನ್ನು ಕಾಣುತ್ತಾರೆ. ದುಡಿವ ಜನರಿಗೆ ಈ ದೇಶದ ಬಡಜನರಿಗೆ 15.3.95 ರಂದು ಮನಮೋಹನ ಸಿಂಗ್ ಎಂಬ ಮಹಾಶಯು ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಹೇಗೆ ಕಾಣುತ್ತಿದೆ?

1996ರಲ್ಲಿ ಚುನಾವಣೆ ಎದುರಿಸಬೇಕಾದದ್ದರ ಅರಿವು ಈ ಬಜೆಟ್ಟಿನ ಹಿಂದೆ ಕೆಲಸ ಮಾಡಿರುವುದು ಸ್ಪಷ್ಟ. ಇದಕ್ಕೆ ಎಲ್ಲರೂ ಹೇಳುತ್ತಿರುವುದು ಹೌದು. ಆದರೆ ಬಡಜನರಿಗೆ ನಿಜಕ್ಕೂ ಏನಿದೆ? ನಿಜವಾಗಿಯೂ ಬಡಜನರಿಗೆ ಅನುಕೂಲಕರವಾಗಿದೆಯೇ? ಅಥವಾ ಬರೀ ಕಣ್ಣೊರೆಸುವ ತಂತ್ರವೇ? ಬಜೆಟ್ಟಿನ ಒಂದೊಂದೇ ಎಳೆ ಬಿಡಿಸಿ ನೋಡೋಣ.

ಮನಮೋಹನಸಿಂಗರ ಭಾಷಣದ ಮೊದಲ ಭಾಗದಲ್ಲಿ ಪೂರ್ತಿಯಾಗಿ ಸಿಗುವುದು ತಮ್ಮ ಸರಕಾರದ ಸಾಧನೆಗಳ ಹೊಗಳಿಕೆ. ಪ್ರಧಾನಮಂತ್ರಿ ನರಸಿಂಹರಾಯರ ನೇತೃತ್ವದಲ್ಲಿ ಅವರು ಉದಾರೀಕರಣ ಪ್ರಾರಂಭಿಸಿದ್ದು ದೇಶ ಆಗ ಅತ್ಯಂತ ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದುದ್ದು ಅವರ ಕ್ರಮಗಳಿಂದ ದೇಶದ ಆರ್ಥಿಕತೆ ಸುಧಾರಿಸುತ್ತಾ ಬಂದಿದ್ದು ಇತ್ಯಾದಿ ಇತ್ಯಾದಿಗಳ ಪ್ರವಾಹ.

ಆದರೆ ಈ ದೇಶದ ದುಡಿವ ಜನರಿಗೆ ಖಂಡಿತವಾಗಿ ಗೊತ್ತಿರುವುದು 1991ರಲ್ಲಿ ಮನಮೋಹನ ಸಿಂಗರು ಅರ್ಥ ಮಂತ್ರಿ ಆದ ಮೇಲೆ ದೇಶಕ್ಕೆ ಅನರ್ಥವಾಗಿ ಹೋಗಿದೆ. ದಿನದಿಂದ ದಿನಕ್ಕೆ ಬೆಲೆಗಳು ಏರುತ್ತಲೇ ಇವೆ ಎಲ್ಲ ಅವಶ್ಯಕ ವಸ್ತುಗಳು ಬೆಲೆಗಳು ಗಗನಕ್ಕೆ ಏರಿವೆ. ಉದ್ದಿಮೆಗಳಲ್ಲಿ ಇಲ್ಲದ ತೊಂದರೆಗಳು ಕಾಣಿಸಿಕೊಂಡು ಕಾರ್ಖಾನೆಗಳು ಮುಚ್ಚುತ್ತಿವೆ. ಕಾರ್ಖಾನೆಗಳಲ್ಲಿ ದುಡಿಯುವವರು ಬೀದಿ ಪಾಲಾಗುತ್ತಿದ್ದಾರೆ. ಪೂರ್ಣ ಕುಟುಂಬಗಳು ಒಪ್ಪೊತ್ತಿನ ಕೂಳಿಗೂ ಗತಿಯಿಲ್ಲದೆ ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ.

ಆದರೆ ಮನಮೋಹನಸಿಂಗರು ತಮ್ಮ ಸಾಧನೆಗಳ ಪಟ್ಟಿಯನ್ನೇ ಒದರಿದ್ದಾರೆ.

ಅವರ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ 60 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆಯಂತೆ. ಈ ದೇಶದಲ್ಲಿ ಎಷ್ಟು ಕೋಟಿ ಜನ ನಿರುದ್ಯೋಗಿಗಳಾಗಿದ್ದಾರೆ, ಎಷ್ಟು ಕಾರ್ಖಾನೆಗಳು ಮುಚ್ಚಿದ್ದರಿಂದ ನಿರುದ್ಯೋಗಿಗಳಾದವರೆಷ್ಟು ಈ ಅಂಕಿ ಸಂಖ್ಯೆಗಳನ್ನು ಅವರು ನೀಡುವುದಿಲ್ಲ.

ಹಾಗೆಯೇ 1991-92ರಲ್ಲಿ ಆರ್ಥಿಕದ ಬೆಳವಣಿಗೆ ಶೇ ೧ರಷ್ಟು ಏರಿದೆಯಂತೆ. ಆದರೆ ಅದೇ ಪ್ರಮಾಣದಲ್ಲಿ ಉದ್ಯೋಗಗಳು ಬೆಳೆಯುತ್ತಿಲ್ಲ.

ಹಾಗೆ ನೋಡುತ್ತಾ ಹೋದರೆ ಮನಮೋಹನಸಿಂಗರು ತಮ್ಮ ಬಜೆಟ್ಟಿನುದ್ದಕ್ಕೂ ಸುಳ್ಳುಗಳ ಸರಮಾಲೆಯೆತ್ತಿ ಪೋಣಿಸಿದ್ದಾರೆ. ಅತ್ಯಂತ ಕಡಿಮೆ ತೆರಿಗೆ ಹೇರಿದ್ದೇನೆ, ಬಡವರಿಗಾಗಿ ಯೋಜನೆಗಳನ್ನು ಮಾಡಿದ್ದೇನೆ, ಆಮದು ಸುಂಕ ಕಡಿಮೆ ಮಾಡಿ ಅಬಕಾರಿ ಸುಂಕ ಕಡಿಮೆ ಮಾಡಿ ಹಣದುಬ್ಬರವನ್ನು ತಡೆದಿದ್ದೇನೆ ಎಂದೆಲ್ಲಾ ಕೊಚ್ಚಿಕೊಂಡಿದ್ದಾರೆ. ಆದರೆ ಇವೆಲ್ಲಾ ಅಪ್ಪಟ ಸುಳ್ಳುಗಳು.

ಬಜೆಟ್ಟಿನ ಕೆಲವೇ ಅಂಶಗಳನ್ನು ವಿಶ್ಲೇಷಿಸೋಣ.

◪ ಹಣಕಾಸು ಖೋತಾವನ್ನು ಈಗಿನ ಒಟ್ಟುತ್ಪಾದನೆಯ ಶೇ. 6.7ರಿಂದ ಶೇ. 5.5ಕ್ಕೆ ಇಳಿಸುವ ಪ್ರಸ್ತಾಪವಿದೆ. ಇದು ಬೆಲೆಯೇರಿಕೆಯ ಮೂಲ. ನಿಜವೇನೆಂದರೆ ಈ ಖೋತಾ ಇರದಂತೆ ಮಾಡಬೇಕು. ಅಂದರೆ ಸ್ವಲ್ಪಮಟ್ಟಿಗೆ ಬೆಲೆಯಿರಿಕೆ ತಡೆಯಬಹುದು. ಆದರೆ ಅರ್ಥ ಮಂತ್ರಿಗಳಿಂದ ಇದನ್ನು ಸಾಧಿಸಲು ಸಾಧ್ಯವಾಗಿಲ್ಲ, ಇದೂ ವಿಶ್ವಬ್ಯಾಂಕ್-ಐಎಂಎಫ್ ಗಳ ಶರತ್ತು. ಆದರೆ ಡಾ ಸಿಂಗರಿಗಾಗಿ ಅವರು ರಿಯಾಯಿತಿ ತೋರುತ್ತಾರೆ.


◪ ವರ್ಷದ ಬಜೆಟ್ ಕೊರತೆ "ಕೇವಲ" 5000 ಕೋಟಿ ರೂಪಾಯಿಗಳು. ಇದು ಸಹ ಹೆಗ್ಗಳಿಕೆ ಅಲ್ಲ, ಮತ್ತೆ ಈ ಕೊರತೆಯಿಂದ ಹಣಕಾಸು ಹೆಚ್ಚಾಗಿ ಬೆಲೆಗಳು ಹೆಚ್ಚಾಗುತ್ತವೆ.

◪ ಆಹಾರ ಮತ್ತು ರಸಗೊಬ್ಬರಗಳ ಮೇಲಿನ ಸಹಾಯಧನವನ್ನು ಏರಿಸಲಾಗಿದೆ. ಆದರೆ ಬೆಲೆಯೇರಿಕೆ ತೆಗೆದುಕೊಂಡರೆ ಈ ಏರಿಕೆ ಏನೇನೂ ಅಲ್ಲ, ಅಲ್ಲದೆ ನಮ್ಮ ದೇಶದಲ್ಲಿ ಕೃಷ್ಟಿಯ ಮೇಲೆ ಅವಲಂಬಿಸಿರುವವರ ಸಂಖ್ಯೆ ಪ್ರಮಾಣ ನೋಡಿದರೆ ಈ ಸಹಾಯಧನ ಒಂದು ಚಿಟಿಕೆ ಅಷ್ಟೇ. ಅತೀ ಹೆಚ್ಚು ಆಹಾರ ಧಾನ್ಯ ಬೆಳೆಸಬೇಕಾಗಿರುವ ನಮ್ಮ ದೇಶದಲ್ಲಿ ಇಂತಹ ಅರೆಬರೆ ಮನಸ್ಸಿನ ಕ್ರಮ ಹಾನಿ ಮಾಡುತ್ತದೆಯೇ ಹೊರತು ಲಾಭವಲ್ಲ.


◪ ಗ್ರಾಮೀಣ ಅಂತರ್‍ರಚನಾ ಅಭಿವೃದ್ಧಿ ನಿಧಿಯನ್ನು ಪ್ರಾರಂಭಿಸುವ ಪ್ರಸ್ತಾಪ ಬಂದಿದೆ. ಸರಕಾರ ದೊಡ್ಡ ಪ್ರಮಾಣದಲ್ಲಿ ಹಣಕಾಸು ನೀಡಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ನೆರವಾಗಬೇಕಾದ ಅವಶ್ಯಕತೆಯಿರುವಾಗ ಇಂತಹ ಅಭಿವೃದ್ಧಿ ನಿಧಿ ಸ್ಥಾಪಿಸಿದರೆ ಅದರಿಂದ ಪ್ರಯೋಜನವೇನೂ ಆಗದು. ಸರಕಾರ ನೀಡುವ ಅಲ್ಪ ಹಣ ಚೂರು ಪಾರು ಕೆಲಸಗಳಿಗೆ ಆದೀತು ಅಷ್ಟೇ.

◪ ಗ್ರಾಮೀಣ ಬಡವರಿಗೆ ಸರಕಾರ ಯೋಜನೆಗಳನ್ನು ಹಾಕಿದೆ. ವಯಸ್ಸಾದವರಿಗೆ ಪೆನ್ಶನ್, ಇಂದಿರಾ ಆವಾಸ್ ಯೋಜನೆಯಡಿ ಮನೆ ಕಟ್ಟಿ ಕೊಡುವುದು, ವಿಮಾ ಸೌಲಭ್ಯಗಳನ್ನು ನೀಡುವುದು ಇತ್ಯಾದಿ. ಇವುಗಳಲ್ಲಿ ಎಲ್ಲವೂ ಹೊಸದಲ್ಲ, ಕೆಲವರಂತೂ ಈಗಾಗಲೇ ರಾಜ್ಯ ಸರ್ಕಾರಗಳು ಜಾರಿ ಮಾಡುವ ಕ್ರಮಗಳು ಅಲ್ಲದೆ ಬೆಲೆಯೇರಿಕೆಯಿಂದ ಉಂಟಾಗುತ್ತಿರುವ ಪರಿಸ್ಥಿತಿ ಗಮನಿಸಿದರೆ ಕೆಲವರಿಗೆ ಈ ಅನುಕೂಲ ನೀಡಿದರೂ ಅದು ಅಂತಹ ದೊಡ್ಡ ಕ್ರಮವೇನೂ ಆಗುವುದಿಲ್ಲ.

ಬಜೆಟ್ಟಿನ 1 ರೂಪಾಯಿ ಬರುವುದೆಲ್ಲಿಂದ......			
ಅಂತರಿಕ ಸಾಲಗಳು	24 ಪೈಸೆ	ವಿದೇಶೀ ಸಾಲಗಳು	2 ಪೈಸೆ
ರಿಸರ್ವ್ ಬ್ಯಾಂಕ್ ಸಾಲಗಳು	2 ಪೈಸೆ	ಕಂಪೆನಿ ತೆರಿಗೆ	8 ಪೈಸೆ
ಆದಾಯ ತೆರಿಗೆ	7 ಪೈಸೆ	ಕಸ್ಟಮ್ಸ್ ಸುಂಕ	15 ಪೈಸೆ
ಅಬಕಾರಿ ಸುಂಕ	21 ಪೈಸೆ	ಇತರ ತೆರಿಗೆಗಳು	1 ಪೈಸೆ
ತೆರಿಗೇತರ ಆದಾಯ	13 ಪೈಸೆ	ಸಾಲೇತರ ಬಂಡವಾಳ ಆದಾಯ	7 ಪೈಸೆ



ಹೋಗುವುದೆಲ್ಲಿಗೆ..... ಬಜೆಟ್ಟಿನ 1 ರೂಪಾಯಿ			
ಸಾಲದ ಬಡ್ಡಿಗೆ	26 ಪೈಸೆ	ರಕ್ಷಣೆಗೆ	13 ಪೈಸೆ
ಸಬ್ಸಿಡಿಗಳಿಗೆ	6 ಪೈಸೆ	ಇತರ ಯೋಜನೇತರ ಖರ್ಚು	10 ಪೈಸೆ
ಸುಂಕ ತೆರಿಗೆಗಳಲ್ಲಿ ರಾಜ್ಯಗಳ ಪಾಲು	15 ಪೈಸೆ	ಯೋಜನೇತರ ನೆರವು	6 ಪೈಸೆ
ರಾಜ್ಯ-ಕೇಂದ್ರಾಡಳಿತ ಸರಕಾರಗಳಿಗೆ ಯೋಜನಾ ನೆರವು	10 ಪೈಸೆ	ಕೇಂದ್ರ ಯೋಜನೆಗೆ	14ಪೈಸೆ



◪ ಅಂತರ್‍ರಚನೆಯಲ್ಲಿ ತೊಡಗುವ ಕಂಪನಿಗಳಿಗೆ ಐದು ವರ್ಷಗಳವರೆಗೆ ತೆರಿಗೆ ರಿಯಾಯಿತಿ. ಇಂತಹ ರಿಯಾಯಿತಿ ಪಡೆದುಕೊಳ್ಳಲು ಐದು ವರ್ಷಗಳವರೆಗೆ ಮಾತ್ರ ಕೆಲಸ ತೋರಿಸುವ ಈ ಕಂಪೆನಿಗಳು ಅನಂತರ ಹೊಸ ಹೊಸ ಕಂಪನಿಗಳನ್ನು ಹುಟ್ಟು ಹಾಕಿ ಜನರ ದುಡ್ಡನ್ನು ದೋಚುತ್ತಾರೆ. -ಇದು ನಮ್ಮ ಜನರ ಅನುಭವ.

◪ ಬಹುತೇಕ ಬಂಡವಾಳ ಸರಕುಗಳಿಗೆ(ಅಂದರೆ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಯಂತ್ರೋಪಕರಣಗಳಿಗೆ)ಆಮದು ಸುಂಕದಲ್ಲಿ ತೀವ್ರ ಕಡಿತ ಮಾಡಲಾಗಿದೆ. ಇದರಿಂದ ವಿದೇಶೀ ಯಂತ್ರಗಳಿಗೆ ಹೆಚ್ಚು ಹಣ ತೆತ್ತು ನಾವು ಇವುಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲೇ ಉತ್ಪಾದಕರಿದ್ದರೆ ಅವರಿಗೆ ವ್ಯಾಪಾರವಾಗುವುದಿಲ್ಲ, ನಮ್ಮ ಉದ್ದಿಮೆಗಳು ಹಾಳಾಗಿಹೋಗುತ್ತವೆ. ನಮ್ಮ ದೇಶದ ಸ್ವಾವಲಂಬನೆ ಹಾಳಾಗುತ್ತದೆ.

◪ ಇದಲ್ಲದೆ ಹಲವು ಸರಕುಗಳ ಮೇಲೆ ಉದಾಹರಣೆಗೆ ಜವಳಿ ಪ್ಲಾಸ್ಟಿಕ್ ಉತ್ಪನ್ನಗಳು, ಅಲಂಕಾರಿಕ ಸಾಮಗ್ರಿಗಳು ತಂಪು ಪಾನೀಯ, ಡ್ರೈ ಸೆಲ್, ಧ್ವನಿಮುದ್ರಿಕೆಗಳು ಇತ್ಯಾದಿಗಳ ಮೇಲಿನ ಅಬಕಾರಿ ಸುಂಕಗಳನ್ನು ಕಡಿಮೆ ಮಾಡಲಾಗಿದೆ. ಇದರಿಂದ ಉದ್ದಿಮೆಗಳಿಗೆ ಲಾಭವೇನೋ ನಿಜ. ಆದರೆ ಈ ಉದ್ದಿಮೆಪತಿಗಳು ಮತ್ತು ವ್ಯಾಪಾರಿಗಳು ಇವುಗಳ ಬೆಲೆಗಳನ್ನೇನೂ ಇಳಿಸುವುದಿಲ್ಲ, ಆದ್ದರಿಂದ ಇದರಿಂದಾಗಿ ಬೆಲೆಯೇರಿಕೆಯೇನೂ ಕಡಿಮೆ ಆಗುವುದಿಲ್ಲ, ಬದಲಿಗೆ ಜನಸಾಮಾನ್ಯರು ಈ ಸರಕುಗಳಿಗೆ ಮೊದಲಿನ ಬೆಲೆಯನ್ನೇ ತೆರಬೇಕು.ಆದರೆ ಸರಕಾರಕ್ಕೆ ಇವರಿಂದ ಬರುವ ಉತ್ಪನ್ನ ಕಡಿಮೆಯಾಗುತ್ತದೆ.

◪ ಹಲವು ವಸ್ತುಗಳ ಮೇಲೆ ಆಮದು ಸುಂಕವನ್ನು ಶೇ. 50ಕ್ಕೆ ಇಳಿಸಲಾಗಿದೆ. ಇವುಗಳಲ್ಲಿ ಕೆಲವು ಕಚ್ಚಾ ಮಾಲುಗಳು. ಇದರಿಂದಾಗಿ ವಿದೇಶೀ ಉದ್ದಿಮೆಗಳಿಗೆ ಒಳ್ಳೆಯ ಮಾರುಕಟ್ಟೆ ನಮ್ಮ ಲ್ಲಿ ದೊರೆಯುತ್ತದೆ. ಆದರೆ ನಮ್ಮ ದೇಶದಲ್ಲೇ ಉತ್ಪಾದನೆಯಾಗುವ ವಸ್ತುಗಳ ಗತಿಯೇನು? ಅವುಗಳಿಗೆ ಮಾರುಕಟ್ಟೆಯಿಲ್ಲ, ಮಾರು ಯಿಲ್ಲದೇ ಹೋದರೆ ಉದ್ದಿಮೆ ಬಾಗಿಲು ಮುಚ್ಚುತ್ತವೆ. ಉದ್ದಿಮೆ ಬಾಗಿಲು ಮುಚ್ಚಿದರೆ ಅಲ್ಲಿ ದುಡಿಯುವ ಕಾರ್ಮಿಕರು ಬೀ ಪಾಲಾಗುತ್ತಾರೆ.

◪ ಈ ತೆರಿಗೆ 'ಇಳಿಕೆ'ಗಳ ಪ್ರವಾಹದ ನಡುವೆ ಯಾವುದರ ಮೇ ಸುಂಕ ಏರಿಸಿದ್ದಾರೆ ನೋಡಿ. ಸಿಮೆಂಟ್‌ನ ಮೇಲೆ, ಟೈರುಗಳ ಮೇ ಅಂದರೆ ಜನಸಾಮಾನ್ಯರು ಮನೆ ಕಟ್ಟಿಕೊಳ್ಳಲು ಇನ್ನೂ ಹೆ ಖರ್ಚು ಮಾಡಬೇಕು. ಸಾರ್ವಜನಿಕ ಸಾರಿಗೆ ವೆಚ್ಚ ಇನ್ನ ಹೆಚ್ಚುತ್ತದೆ. ಇದರ ಜತೆಗೆ ರೈಲ್ವೆ ಬಜೆಟ್ ಹಾಕಿದ ಹೆಚ್ಚಿನಸಾಗಾಣಿಕೆ

◪ ಸಣ್ಣ ಕೈಗಾರಿಕೆಗಳಿಗೆ ಕೆಲವು ರಿಯಾಯಿತಿಗಳನ್ನು ಪ್ರಕಟಿಸಲಾಗಿ ಸಣ್ಣ ಕೈಗಾರಿಕೆಯ ವಾರ್ಷಿಕ ವ್ಯವಹಾರ ಎರಡು ಕೋಟಿಯವ ಇದ್ದರೆ ಮಾತ್ರ ಅಂತಹ ಘಟಕಗಳಿಗೆ ಮಾತ್ರ ಅಬಕಾರಿ ಸುಂ ವಿನಾಯಿತಿ ದೊರೆಯುತ್ತಿತ್ತು, ಈಗ ಈ ಮಿತಿಯನ್ನು ಕೋಟಿ ಗಳಿಗೆ ಏರಿಸಲಾಗಿದೆ. ಇದು ಸಣ್ಣ ಕೈಗಾರಿಕೆಗಳ ನೆವದಲ್ಲಿ ದೊ ಕೈಗಾರಿಕೆಗಳಿಗೆ ರಿಯಾಯಿತಿ ನೀಡುವ ಹುನ್ನಾರ ಎಂಬುದು ಇದಲ್ಲದೆ ಸಣ್ಣ ಕೈಗಾರಿಕೆಗಳಲ್ಲೇ ದೊಡ್ಡವರಿಗೆ ಅನುಕೂಲ ಮ ಕೊಡುವ ಸಂಚು.

◪ ಖಾದಿ ಮತ್ತು ಗ್ರಾಮೀಣ ಉದ್ದಿಮೆಗಳ ಮಂಡಳಿಯ ಮೂ 1000 ಕೋಟಿ ರೂಗಳ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ಸರಕಾರ ರೂಪಿಸಿದೆ. ಇದಕ್ಕೆ ಹಣ ನೀಡಬೇಕಾದವರು ವಾ ಬ್ಯಾಂಕುಗಳು.

◪ ನಬಾರ್ಡ್‌ನ ಮೂಲಕ ಗ್ರಾಮೀಣಾಭಿವೃದ್ಧಿಗೆ ಹಣ ಬರು ದದ್ದು ಹೀಗೆ- ಆದ್ಯತೆಯ ವಲಯಕ್ಕೆ ನಿಗದಿತ ಸಾಲ ನೀಡಲ ಇರುವ ವಾಣಿಜ್ಯ ಬ್ಯಾಂಕುಗಳು ಅಷ್ಟು ಹಣವನ್ನು ನಬಾರ್ಡ್ ನೀಡಬೇಕು. ಇದು ಆದ್ಯತೆಯ ವಲಯಕ್ಕೆ ನೀಡಿದ ಹಣವ ಪರಿಗಣಿತವಾಗುತ್ತದೆ.

◪ ಇದು ಬೆಳವಣಿಗೆಯ ಬಜೆಟ್ ಎನ್ನಲಾಗುತ್ತಿದೆ. ಆದರೆ ಯಾ ಬೆಳವಣಿಗೆಗೆ ಎಂಬುದು ಪ್ರಶ್ನೆ. ಬಹುರಾಷ್ಟ್ರೀಯ ಕಂಪನಿಗಳು ಮ ದೊಡ್ಡ ಬಂಡವಾಳಶಾಹಿಗಳಿಗೆ ಅದರಲ್ಲೂ ಗುತ್ತೇದಾರಿ ಬಂಡ ಳಿಗರಿಗೆ ಇದು ಬೆಳವಣಿಗೆ ಬಜೆಟ್ ನಿಜ. ಆದರೆ ದುಡಿಯು ಜನರಿಗಂತೂ ಅಲ್ಲ.

ಬಜೆಟ್ಟಿನಲ್ಲಿ ಹಣಕಾಸು ಕೊರತೆಯನ್ನು 5000 ಕೋ ರೂಪಾಯಿಗಳಿಗೆ ಸೀಮಿತಗೊಳಿಸಿರುವುದಾಗಿ ಹೇಳಲಾಗುತ್ತಿದೆ. ಆ ಇದು ಸಾರ್ವಜನಿಕ ಉದ್ದಿಮೆಗಳ ಶೇರುಗಳ ಮಾರಾಟದಿಂದ ಬರು 7000 ಕೋಟಿ ರೂಪಾಯಿಗಳನ್ನು ಕಳೆದ ನಂತರ ಉಳಿಯು ಮೊತ್ತ. ಇದಿಲ್ಲದೇ ಹೋದರೆ ಹಣಕಾಸು ಕೊರತೆ 12000 ಕೋ ರೂಪಾಯಿಗಳಷ್ಟಾಗುತ್ತದೆ.

◪ ಕಳೆದ ವರ್ಷದಲ್ಲೇ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿಗೆ ಹಣಕಾ ಕೊರತೆ ಉಂಟಾಯಿತು. ಇದು ಚುನಾವಣೆಯ ವರ್ಷವಾದ್ದರಿಂ ಸರಕಾರದ ಖರ್ಚುಗಳು ಇನ್ನೂ ಹೆಚ್ಚಾಗುವುದರಿಂದ ಈ ಹಣಕಾ ಕೊರತೆ ಇನ್ನೂ ಅಪಾರವಾಗಿ ಹೆಚ್ಚಾಗಿ ಬೆಲೆ ಏರಿಕೆಯನ್ನು ಇ ಹೆಚ್ಚಿಸುತ್ತದೆ. ಇದು ಈ ಸರಕಾರ ಬಡಜನರ ಹಿತ ಕಾಯುವ ರೀ

ಮತ್ತೆ ಅದೇ ಬೂಟಾಟಿಕೆಯ ಪ್ರದರ್ಶನ

"ಭಾವುಕತೆ"ಯ ಪ್ರದರ್ಶನ "ಉದಾರ" ಹಣಕಾಸು ಮಂತ್ರಿಗಳ ಬಜೆಟ್ ಭಾಷಣದಲ್ಲಿ ಇರಲೇಬೇಕು ಎಂಬುದು ಈಗ ಒಂದು ನಿಯಮವೇ ಆಗಿಬಿಟ್ಟಂತಿದೆ. ಇಲ್ಲದಿದ್ದರೆ ಬಜೆಟ್‌ನಲ್ಲಿ ಅಡಗಿರುವ ಜನವಂಚನೆಯನ್ನು ಮರೆಮಾಚುವುದು ಹೇಗೆ?

ಮೊದಲ ಬಜೆಟ್ ಭಾಷಣದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಪ್ರಾಣ ಬಲಿದಾನ ಮಾಡಿದ ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು ಹಾಡುತ್ತಿದ್ದ ಸ್ಫೂರ್ತಿದಾಯಕ ಹಾಡನ್ನು ಉದ್ಧರಿಸಿ ವಿರೂಪಗೊಳಿಸಿದ್ದರೆ, ಕಳೆದ ಬಜೆಟ್‌ನಲ್ಲಿ ನೆಹರೂರವರ ಸಾಲುಗಳನ್ನು, ರವೀಂದ್ರನಾಥ್ ಟಾಗೋರರವರ ಕವನಗಳ ಸಾಲುಗಳನ್ನು ಉದ್ಧರಿಸಿದರು. "ವಿವೇಚನಾ ಶೀಲತೆಯ ನಿರ್ಮಲ ಪ್ರವಾಹ ಜಡ ರೂಢಿಗಳ ಮರಳಲ್ಲಿ ಇಂಗಿಹೋಗದಿರುವಂತಹ ಭಾರತವನ್ನು ಕಟ್ಟೋಣ" ಎಂದು ಹೇಳುತ್ತಾ ತಮ್ಮ ವಿವೇಚನಾ ಶೀಲತೆಯನ್ನು ಐಎಂಎಫ್-ವಿಶ್ವ ಬ್ಯಾಂಕಿಗೆ ಒತ್ತೆಯಿಟ್ಟಿರುವುದನ್ನು ಮರೆ ಮಾಚಿದ್ದರು.

ಈ ವರ್ಷ ಮತ್ತೆ ಅಂತಹುದೇ ಬೂಟಾಟಿಕೆಯ ಪ್ರದರ್ಶನ ನಡೆಯಿತು. "ಕಾಲ ಕೂಡಿ ಬಂದ ಒಂದು ವಿಚಾರವನ್ನು ಭೂಮಿಯ ಮೇಲಿನ ಯಾವುದೇ ಶಕ್ತಿ ತಡೆದಿಡಲಾರದು. ಭಾರತ ಒಂದು ಪ್ರಧಾನ ಆರ್ಥಿಕ ಶಕ್ತಿಯಾಗುತ್ತದೆ ಎಂಬುದು ಅಂತಹ ಒಂದು ವಿಚಾರ" ಎಂದು ತಾನು ಮೊದಲ ಬಜೆಟ್ ಭಾಷಣದಲ್ಲಿ ಹೇಳಿದ್ದೆ ಎಂದು ನೆನಪಿಸಿದ ಸಿಂಗ್ ಸಾಹೇಬರು ತಮ್ಮ ಸರಕಾರದ ನೀತಿಗಳು ಭಾರತವನ್ನು ವಿಶ್ವಾದ ಶಕ್ತಿ ಕೇಂದ್ರವಾಗಿಸುತ್ತಿವೆ ಎಂದು ಬೆನ್ನು ತಟ್ಟಿಕೊಂಡರು.

ಈ "ಶಕ್ತಿಕೇಂದ್ರ"ದ ನಿಜವಾದ ಶಕ್ತಿ ಪ್ರತಿಷ್ಠೆ ಈ ನರಸಿಂಹರಾವ್-ಮನಮೋಹನಸಿಂಗ್ ಜೋಡಿಯ ಆರ್ಥಿಕ ನೀತಿಗಳಿಂದ ಯಾವ ಪಾತಾಳಕ್ಕೆ ಇಳಿಯುತ್ತಿದೆ ಎಂಬುದನ್ನೂ ಈ ದೇಶದ ದುಡಿಯುವ ಜನ ಕಳೆದ ಮೂರೂವರೆ ವರ್ಷಗಳಿಂದಲೂ ನೋಡುತ್ತಾ ಬಂದಿದ್ದಾರೆ. ಇತ್ತೀಚಿನ ಉದಾಹರಣೆಯೆಂದರೆ ಹೊಸ ವರ್ಷದ ಮುನ್ನಾ ದಿನ ಇಡೀ ಅಭಿವೃದ್ಧಿಶೀಲ ಜಗತ್ತಿಗೇ ಆದರ್ಶ ಪ್ರಾಯವಾಗಿದ್ದ ನಮ್ಮ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡಲು ಸುಗ್ರೀವಾಜ್ಞೆ ಹೊರಡಿಸಿದ್ದು -ಜನವರಿ 1, 1995ರಿಂದ ಅಸ್ತಿತ್ವಕ್ಕೆ ಬರಲಿದ್ದ ಗ್ಯಾಟ್ ಹೇರಿದ್ದ ವಿಶ್ವವ್ಯಾಪಾರ ಸಂಘಟನೆಗೆ ತನ್ನ ಶರಣಾಗತಿ ಸಾರಲು!

ಭಾರತದಂತಹ ದೊಡ್ಡ ದೇಶದಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ಚೌಕಟ್ಟಿನೊಳಗೇ ಬೃಹತ್ ಸಾಮಾಜಿಕ, ಆರ್ಥಿಕ ಪರಿವರ್ತನೆ ತರುತ್ತಿರುವುದನ್ನು ಇಡೀ ಜಗತ್ತೇ ವಿಸ್ಮಯದಿಂದ ನೋಡುತ್ತಿದೆಯಂತೆ. ಜಗತ್ತಿನಲ್ಲಿ ಇಂತಹ ಉದಾಹರಣೆಯೇ ಇಲ್ಲವಂತೆ! ಮೊನ್ನೆ-ಮೊನ್ನೆಯವರೆಗೆ ಐಎಂಎಫ್-ವಿಶ್ವಬ್ಯಾಂಕ್ ತತ್ವವನ್ನು ನಂಬಿದವರು ಮೆಕ್ಸಿಕೋದ ಬಗ್ಗೆಯೂ ಹಾಗೆಯೇ ಹೇಳುತ್ತಿ ದ್ದರು ಎಂದು ನೆನಪಿಸಿಕೊಂಡರೆ ಸಾಕಲ್ಲವೇ?

ಈ ಬಾರಿಯೂ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯನ್ನು ಡಾ. ಸಿಂಗ್ ನೆನಪಿಗೆ ಬರದಿರಲಿಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಸ್ಫೂರ್ತಿ ತುಂಬಿದ ಆದರ್ಶವಾದ, ತ್ಯಾಗ ಮನೋಭಾವ ಈಗಲೂ ಸಾಮಾಜಿಕ ಬದಲಾವಣೆಯ ಸಾಧನವಾಗಲಿ ಎಂದು ರಾಜಕಾರಣಿಗಳಿಗೆ ಒಣ ಉಪದೇಶ ಝಾಡಿಸುತ್ತಾ ತಮ್ಮ ಬಜೆಟ್ ಭಾಷಣದಲ್ಲಿ ತುಂಬಿದ್ದ ದೇಶದ ಭವಿಷ್ಯಕ್ಕೇ ಅಪಾಯಕಾರಿಯಾದ ನಿಲುವನ್ನು ಅಡಗಿಸಿಡಲು ಪ್ರಯತ್ನಿಸಿದರು. ✡

ರಾವ್ ಸರಕಾರದ 'ಸುಧಾರಣೆ'ಯ ಬೆಂಬಲಿಗರು ಏನನ್ನುತ್ತಾರೆ?

ಹಿಂದಿನ ವರ್ಷ ಬಜೆಟ್ ಅಂದಾಜುಗಳೆಲ್ಲಾ ಏರುಪೇರಾಗಿದ್ದವು. ಈ ಬಾರಿಯೂ ಏರು ...ಗಿವೆ. ಬಜೆಟ್ ಖೋತಾ ಶೇ. 6 ಎಂದು ಅಂದಾಜು ಮಾಡಿದ್ದರೂ ಕಳೆದ ಬಾರಿಯೂ ನೀಡಿದ ...ರಿ ಸುಂಕ ರಿಯಾಯ್ತಿಗಳಿಂದ ಅದು ಅಷ್ಟಕ್ಕೇ ನಿಲ್ಲುವುದಿಲ್ಲ ಎಂದು ಡಾ। ಸಿಂಗರ ...ಮಾನಿಗಳಿಗೂ ಸಂಶಯವಿತ್ತು. ಅದೀಗ ನಿಜವಾಗಿದೆ. ಇಷ್ಟೇ ಅಲ್ಲ, 1993-94ರ ಪರಿಷ್ಕೃತ ...ಜುಗಳೂ ಏರುಪೇರಾಗಿವೆ. ಉದಾಹರಣೆಗೆ 1993-94ರಲ್ಲಿ ಕೊರತೆ 4214 ಕೋಟಿ ರೂ. ...ು 1993-94ರ ಬಜೆಟ್ ಅಂದಾಜು ಮಾಡಿತ್ತು. 1994-95ರ ಬಜೆಟ್ ನೀಡುವಾಗ ಅದರ ...ೃತ ಅಂದಾಜು 9060 ಕೋಟಿ ರೂ ಆಗಿತ್ತು. 1995-96ರ ಬಜೆಟ್ ನೀಡುವ ವೇಳೆಗೆ ...3-94ರ ನಿಜವಾದ ಕೊರತೆ ಅಳತೆ ಸಿಕ್ಕಿತ್ತು. ಅದು ವಾಸ್ತವವಾಗಿ 10960 ಕೋಟಿ ರೂ ...ೆ. ಇದನ್ನೇ ಅಳತೆಗೋಲಾಗಿ ಮಾಡಿ ಈ ಬಾರಿಯ ಬಜೆಟ್‌ನೊಂದಿಗೆ ಕೊಟ್ಟಿರುವ ಈ ಅಂಕೆ ...ಗಳ ಪ್ರಾಮಾಣಿಕತೆಯನ್ನು ಊಹಿಸಿ.

	1993-94ರ ಪರಿಷ್ಕೃತ ಅಂದಾಜು	1993-94ರ ನಿಜ ಸಂಖ್ಯೆ	1994-95ರ ಬಜೆಟ್ ಅಂದಾಜು	1994-95ರ ಪರಿಷ್ಕೃತ ಅಂದಾಜು	1995-96ರ ಬಜೆಟ್ ಅಂದಾಜು
...ೆ ಗಳಿಕೆ	54473	53449	62742	64988	74374
... ಮತ್ತು ಇತರ ಬಾಬ್ತುಗಳಿಂದ	49491	49297	48915	55035	52634
...ಟ್ಟು ಗಳಿಕೆ	134812	130893	145699	156272	167151
...ೋಜನೇತರ ಖರ್ಚು	97846	98998	105117	113511	123651
...ೋಜನಾ ಖರ್ಚು	46026	42855	46582	48761	48500
...ಟ್ಟು ಖರ್ಚು	143872	141853	151699	162272	172151
...ನ್ನೂ ಗಳಿಕೆಯಲ್ಲಿ ಕೊರತೆ	34058	32716	32727	34132	35541
...ಟ್ ಕೊರತೆ	9060	10960	6000	6000	5000
...ಕಾಸು ಕೊರತೆ	68551	60257	54915	61035	57634

...ಂಗ್ರೆಸ್ ಸರಕಾರದ ನೀತಿಗಳನ್ನು ಹೊಗಳುವ ...ಮಿಕ್ಸ್ ಟೈಮ್ಸ್"ಪತ್ರಿಕೆಗೆ ಈ ಬಜೆಟ್ ಗ್ರಾಮೀಣ ...ದ ಜನತೆಗೆ ಏನನ್ನು ನೀಡಿದೆ ಎಂಬುದರ ಬಗ್ಗೆ ...ತ್ತಾ ಹೇಳುತ್ತದೆ- "ಸಾಮಾಜಿಕ ವಲಯಗಳಿ... ...ಾ ಸಿಂಗರು ತೆಗೆದಿರಿಸಿರುವ ಮೊತ್ತ ನಿಜದಲ್ಲಿ ... ವರ್ಷಗಳಿಗಿಂತ ಕಡಿಮೆ ಆಗಿದೆ ಎಂಬುದನ್ನು ...ು ಗಮನಿಸುವಂತೆ ಕಾಣುವುದಿಲ್ಲ. ಗ್ರಾಮೀಣ ...ದ್ಧಿ ಕಾರ್ಯಕ್ರಮಗಳಿಗಾಗಿ ನೀಡುವ ಹಣದಲ್ಲಿ ...ರಷ್ಟು ಹೆಚ್ಚಳ ಬಹಳ ಹೆಚ್ಚಿಗೆ ಏನಲ್ಲ"

ಇದು ಈ ಬಜೆಟ್‌ನ ಸ್ವರೂಪ.

ಉದಾರೀಕರಣದ ಎಲ್ಲ ನೀತಿಗಳೂ ಈ ಬಜೆಟ್ಟಿನಲ್ಲಿ ಹೊರಹೊಮ್ಮಿವೆ. ಆದರೆ ಚುನಾವಣಾ ವರ್ಷವಾದ್ದರಿಂದ ಕೆಲವು ಸಕಾರಾತ್ಮಕ ಗುಣಗಳು ಈ ಬಜೆಟ್ಟಿನಲ್ಲಿ ಇವೆ. ಈ ಬಜೆಟ್ಟಿನಲ್ಲಿ ಹಿಂದಿನ ಬಜೆಟ್ಟುಗಳಂತೆ ಕಂಪನಿಗಳ ತೆರಿಗೆಗಳನ್ನು ಕಡಿಮೆ ಮಾಡಲಾಗಿಲ್ಲ. ರೂಪಾಯಿಯ ಪೂರ್ಣ ಪರಿವರ್ತನೆಗೆ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಆಡಳಿತಾತ್ಮಕ ಬೆಲೆ ಏರಿಕೆಯನ್ನು ಮಾಡಲಾಗಿಲ್ಲ. ಇವೆಲ್ಲಾ ಸಕಾರಾತ್ಮಕ ಅಂಶಗಳು ಹೌದು.

ಆದರೆ ಆರ್ಥಿಕ ದಿಸೆ ಮೊದಲಿನಂತೆಯೇ ಇದೆ. ಇಂದು ನೀಡಿರುವ ರಿಯಾಯಿತಿಗಳೆಲ್ಲಾ ಚುನಾವಣೆಗಳು ಮುಗಿಯುತ್ತಿರುವಂತೆ ದೇಶದ ಬಡ ಜನರನ್ನು ಯದ್ವಾತದ್ವಾ ಬಂದು ಗುದ್ದತೊಡಗುತ್ತವೆ. ಆ ನೋವುಗಳನ್ನು ಅಲ್ಲಿಯವರೆಗೆ ತಡೆ ಹಿಡಿದಿರುವುದೊಂದೇ ಈ ರಿಯಾಯಿತಿಗಳ ಅರ್ಥ.

...ರ್ಥಿಕ ಸಮೀಕ್ಷೆ ಏನು ಹೇಳುತ್ತದೆ?

...ಮಾಜಿಕ ವಲಯದ ಬಗ್ಗೆ

"ನಮ್ಮ ಅಪಾರ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು ...ನತೆ ಮತ್ತು ಬೆಳವಣಿಗೆ ಇವೆರಡಕ್ಕೂ ಅತ್ಯವಶ್ಯ. ಈ ನಿಟ್ಟಿನಲ್ಲಿ ಬಹಳ ...ನೆಗಳಾಗಿದ್ದರೂ ನಮ್ಮ ಜನಸಂಖ್ಯೆಯ ಪ್ರಮಾಣವನ್ನು ನೋಡಿದರೆ ಇದು ...ಾಧ್ಯವೆನಿಸುವಂತೆ ಇದೆ. ಆರ್ಥಿಕ ಬಿಕ್ಕಟ್ಟಿನಿಂದ ಹೊರಬಂದು ಸ್ಥಿರಗೊಂಡ ...ಲೆ ಬಡವರು ಮತ್ತು ದುರ್ಬಲರನ್ನು ರಕ್ಷಿಸಲು ವಿಶೇಷ ಕಾಳಜಿ ...ಸಬೇಕಾಗುತ್ತದೆ.

ಇದು ಹೇಳುವುದು -ಆದರೆ ಮಾಡುವುದು? ಬೆಲೆಗಳು ಏರುತ್ತಲೇ ...ವೆ. ಜನ ಹೆಚ್ಚೆಚ್ಚು ನಿರುದ್ಯೋಗಿಗಳಾಗುತ್ತಿದ್ದಾರೆ. ಕೆಲವೇ ಶ್ರೀಮಂತರು ...ನ್ನೂ ಶ್ರೀಮಂತರಾಗುತ್ತಿದ್ದಾರೆ. ಬಡವರ ಬಡತನ ಹೆಚ್ಚಾಗುತ್ತಲೇ ಇದೆ.

...ಡತನದ ಬಗ್ಗೆ

"ಬರೀ ಬಜೆಟ್ಟಿನಲ್ಲಿ ಹಣ ತೆಗೆರಿಸುವುದರಿಂದ ಬಡತನ ನಿರ್ಮೂಲವಾಗು...ವಿಲ್ಲ. ಈ ಕಾರ್ಯಕ್ರಮಗಳ ಆಡಳಿತೆಯನ್ನು ಪೂರ್ಣವಾಗಿ ಪುನಶ್ಚೇತನಗೊಳಿಸಿ ...ದ್ದೇಶಿತ ಫಲಾನುಭವಿಗಳಿಗೆ ಲಾಭ ದೊರೆಯುವಂತೆ ಮಾಡಬೇಕು. ಸೋರು... ತಡೆಗಟ್ಟಬೇಕು. ಇವುಗಳನ್ನು ಹೇಳುವುದು ಸುಲಭ -ಆದರೆ ಕಾರ್ಯಗತ...ಳಿಸುವುದು ಕಷ್ಟ..."

ಆದರೆ ಸರಕಾರ ಮಾಡುತ್ತಿರುವುದು.-ಬಜೆಟ್ಟಿನಲ್ಲಿ ಬರೀ ಹಣ ತೆಗೆದಿರಿಸು...ವನ್ನು ಮಾತ್ರ. ಅದೂ ಸ್ವಲ್ಪ ಮಾತ್ರ ಅಲ್ಲವೇ?

ಈ ಬಜೆಟ್ ಹಣದುಬ್ಬರ ತಡೆಯುತ್ತದೆಯೇ?



ಸಹಜವಾಗಿಯೇ ಹಣಕಾಸು ಮಂತ್ರಿಗಳು ಮತ್ತು ಅವರ ವಿವಿಧ ತುತ್ತೂರಿಗಳು ಹಣದುಬ್ಬರ-ವಿರೋಧಿ ಬಜೆಟ್ ಇದು ಎಂದು ಜನರನ್ನು ನಂಬಿಸುವ ಪ್ರಯತ್ನಿಸುತ್ತಿದ್ದಾರೆ. ಆದರೆ ನಿಜಾಂಶವೇನು? ಮನಮೋಹನಸಿಂಗರ ಕೆಲವು ಅಭಿಮಾನಿಗಳಿಗೂ, ಉದಾರೀಕರಣದ ಕೆಲವು ಕಟ್ಟಾ ಬೆಂಬಲಿಗರಿಗೂ ಈ ಬಗ್ಗೆ ಅನುಮಾನವಿದ್ದಂತಿದೆ.

ಬಲವಾದ ಅನುಮಾನವಿದ್ದಂತಿದೆ. ಇರಲಿ. ಹಣದುಬ್ಬರವನ್ನು ಈ ಬಜೆಟ್ ಹೇಗೆ ನಿಯಂತ್ರಿಸಲಿದೆ? ಇದಕ್ಕಿಂತ ಮುಖ್ಯವಾಗಿ ಈಗಿನ ಹಣದುಬ್ಬರದ ಕಾರಣ ಏನೆಂದು ಸರಕಾರದ ಅಭಿಪ್ರಾಯ? ಮೂರೇ ವರ್ಷಗಳಲ್ಲಿ ಆರ್ಥಿಕ ಈಗ ಹಾಲುಜೇನು ಸುರಿಯುವ ಹೊಸ್ತಿಲಲ್ಲಿದೆ ಎಂದೆಲ್ಲಾ ಬೆನ್ನು ತಟ್ಟಿಕೊಂಡ ಮೇಲೆ ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ "ಕೆಲವು ದುರ್ಬಲ ಸ್ಥಾನಗಳಿವೆ. ಅವನ್ನು ತುರ್ತಾಗಿ ನೋಡಬೇಕು" ಎಂದರು. ಆ "ದುರ್ಬಲ ಸ್ಥಾನ"ಗಳಲ್ಲಿ ಹಣದುಬ್ಬರವೂ ಒಂದು-ಇದೊಂದು ಗಂಭೀರ ಸಮಸ್ಯೆ ಎಂದೇನೋ ಅವರು ಒಪ್ಪಿಕೊಂಡರು. ಆದರೆ ಅವರು ಅದಕ್ಕೆ ನೀಡಿರುವ ಕಾರಣಗಳನ್ನು ನೋಡಿದರೆ ಹಣದುಬ್ಬರದ ಸಮಸ್ಯೆಯನ್ನು ಈ ಬಜೆಟ್ ಕಸರತ್ತಿನ ಮೂಲಕ ಪರಿಹರಿಸಲು ಸಾಧ್ಯವೇ ಎಂಬ ಅನುಮಾನ ವಸ್ತುನಿಷ್ಠವಾಗಿ ಯೋಚಿಸುವ ಯಾರಿಗಾದರೂ ಮೂಡದಿರಲು ಸಾಧ್ಯವಿಲ್ಲ.

ಆರ್ಥಿಕದಲ್ಲಿ ಹಣ ಪೂರೈಕೆ ಹೆಚ್ಚುವುದು, ಸರಕಾರದ ಖರ್ಚು ವಿಪರೀತ ಹೆಚ್ಚುವುದು, ಬೇಡಿಕೆಯಲ್ಲಿ ವಿಪರೀತ ಹೆಚ್ಚಳ, ಸಾಮಗ್ರಿಗಳ ಪೂರೈಕೆಯಲ್ಲಿ ಕಡಿತ ಮತ್ತು ಬೆಳೆ ನಷ್ಟ-ಇವು ಸಾಮಾನ್ಯವಾಗಿ ಎಲ್ಲಾ ಬಣ್ಣಗಳ ಆರ್ಥಿಕ ತಜ್ಞರು ಹಣದುಬ್ಬರಕ್ಕೆ ಕಾರಣವೆಂದು ನೀಡುವ ಸಂಗತಿಗಳು. ಆದರೆ ಈಗಿನ ಅಂದರೆ 1991-92ರಲ್ಲಿ ನರಸಿಂಹರಾವ್-ಮನಮೋಹನಸಿಂಗರ "ಸುಧಾರಣೆ" ಜ್ಯಾರಿಯಾದಂದಿನಿಂದಲೂ ಕಂಡುಬರುತ್ತಿರುವ ಹಣದುಬ್ಬರಕ್ಕೆ(1980ರ ಅವಧಿಯಲ್ಲಿ ಸರಾಸರಿ ವಾರ್ಷಿಕ ಶೇ. 7.2 ರಷ್ಟಿದ್ದ ಹಣದುಬ್ಬರ ಕಳೆದ ಮೂರೂವರೆ ವರ್ಷಗಳಲ್ಲಿ ಸರಾಸರಿ 10.3ಕ್ಕೇರಿದೆ) ಈ ಯಾವ ಕಾರಣಗಳನ್ನೂ ಕೊಡಲು ಸಾಧ್ಯವಿಲ್ಲ ಎಂದು ಒಬ್ಬ ಪ್ರಸಿದ್ಧ ಆರ್ಥಿಕ ತಜ್ಞ ಡಾ|| ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

ವಾಸ್ತವವಾಗಿ ಹಣ ಪೂರೈಕೆಯ ದರದ ಏರಿಕೆ 1980-91ರ ಅವಧಿಯಲ್ಲೂ ಸುಮಾರು ಶೇ. 17 ಇತ್ತು. 1991-94ರಲ್ಲೂ ಅಷ್ಟೇ ಇದೆ ಎನ್ನುತ್ತಾರೆ ಅವರು. ಇನ್ನು ಸರಕಾರದ ಖರ್ಚಿನಲ್ಲೂ ಐಎಂಎಫ್ ನ "ಲಕ್ಷ್ಮಣರೇಖೆ"ಯನ್ನೇ ಶಿರಸಾವಹಿಸಿ ಪಾಲಿಸಿರುವುದರಿಂದ ವೃದ್ಧಿಯಾಗಿಲ್ಲ, ಬೇಡಿಕೆಯಲ್ಲೂ ಹೆಚ್ಚಳವಾಗಿಲ್ಲ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಏರಿಲ್ಲ, ಪೂರೈಕೆಯಲ್ಲೂ ಕೊರತೆಯಯಾಗಿಲ್ಲ, ಸತತವಾಗಿ ಆರು ವರ್ಷಗಳ ಕಾಲ ಒಳ್ಳೆಯ ಮಳೆ ಬಂದು ಒಳ್ಳೆ ಬೆಳೆ ಬಂದಿದೆ.

ಹಾಗಿದ್ದರೆ ಏಕೆ ಈ ಹಣದುಬ್ಬರ? ಏಕೆಂದರೆ ಸರಕಾರವೇ ಬೆಲೆ ಏರಿಸುತ್ತಿರುವುದರಿಂದ ಮತ್ತು ಸಬ್ಸಿಡಿಗಳನ್ನು ಇಳಿಸುತ್ತಿರುವುದರಿಂದ. ಏಕೆ? ಏಕೆಂದರೆ ಇದು ಅವರ "ಸುಧಾರಣಾ"ತಂತ್ರದ ಒಂದು ಮೂಲ ಮಂತ್ರ-ಐಎಂಎಫ್-ವಿಶ್ವ ಬ್ಯಾಂಕು ಬೋಧಿಸಿರುವ ಮಂತ್ರ. ಅಂದರೆ ಹಣದುಬ್ಬರ ಆ ಮೂಲಮಂತ್ರದ ಭಾಗ.

ಹಣಕಾಸು ಮಂತ್ರಿಗಳ ಬಜೆಟ್ ಭಾಷಣದ ಪ್ರಕಾರ ಹಣದುಬ್ಬರಕ್ಕೆ ಕಾರಣ -ಆಹಾರ ಧಾನ್ಯಗಳ ಕೊಳ್ಳುವ ಬೆಲೆಯಲ್ಲಿ ತೀವ್ರ ಹೆಚ್ಚಳ, ಕಬ್ಬು, ಹತ್ತಿ, ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಕಡಿತ ಹಾಗೂ ಆರ್ಥಿಕವನ್ನು ಬಾಧಿಸುತ್ತಿರುವ ಹಣಕಾಸು ಕೊರತೆ.

ಆಹಾರ ಧಾನ್ಯಗಳ ಕೊಳ್ಳುವ ಬೆಲೆ ಹೆಚ್ಚಲು ಕಾರಣ ಸ್ವತಃ ಸರಕಾರವೇ. ಸರಕಾರವೇ ವಿವಿಧ ಸಾಮಗ್ರಿಗಳ ಉಕ್ಕು, ಕಲ್ಲಿದ್ದಲು,, ರಸಗೊಬ್ಬರಗಳ ಬೆಲೆ ಏರಿಸಿರುವುದರಿಂದ ಕೃಷಿ ಉತ್ಪನ್ನಗಳ ಉತ್ಪಾದನಾ ಖರ್ಚು ಹೆಚ್ಚುತ್ತದೆ. ಅದರ ಒಂದು ಪರೋಕ್ಷ ಪರಿಣಾಮವಾಗಿ ಧಾನ್ಯಗಳ ಕೊಳ್ಳುವ ಬೆಲೆಯನ್ನೂ ಅದು ಹೆಚ್ಚಿಸುತ್ತದೆ. ಕಬ್ಬು, ಹತ್ತಿ, ಇತ್ಯಾದಿ ಹೋಗಲಿ-ಅಕ್ಕಿಯ ಬೆಲೆ ಕಳೆದ ಮೂರು ವರ್ಷಗಳಲ್ಲಿ ಶೇ. 60.7 ಏಕೆ ಹೆಚ್ಚಬೇಕಾಗಿತ್ತು? ಅಲೂಗೆಡ್ಡೆ ಬೆಲೆ ಶೇ. 84.9, ಈರುಳ್ಳಿ ಬೆಲೆ ಶೇ. 70.3ರಷ್ಟು ಏಕೆ ಹೆಚ್ಚಬೇಕಾಗಿತ್ತು?

ಬೆಲೆಯೇರಿಕೆಯಲ್ಲೂ ಅತೀ ಹೆಚ್ಚು ಬೆಲೆಯೇರಿಕೆ ಕಂಡುಬಂದಿರುವುದು ಆಹಾರ ವಸ್ತುಗಳಲ್ಲಿ-ಆಹಾರ ಧಾನ್ಯಗಳ ಬೆಲೆ ಶೇ. 52.7ರಷ್ಟು, ಬೇಳೆಗಳ ಬೆಲೆ ಶೇ. 65.9ರಷ್ಟು, ತರಕಾರಿಗಳದ್ದು ಶೇ. 55.2, ಮೊಟ್ಟೆ, ಮೀನು, ಮಾಂಸದ್ದು ಶೇ. 79.4ರಷ್ಟು, ಸಾಂಬಾರು ಜಿನಿಸುಗಳದ್ದು ಶೇ. ೫೨.೫ರಷ್ಟು ಏರಿವೆ-ಆದರೆ ಈ ಅವಧಿಯಲ್ಲಿ ಸಗಟು ಬೆಲೆ ಸೂಚ್ಯಂಕದ ಏರಿಕೆ ಶೇ. 44.4. ಅಂದರೆ ಜನಸಾಮಾನ್ಯರ ಬಳಕೆಯ ಸಾಮಗ್ರಿಗಳಲ್ಲೇ ಹೆಚ್ಚಿನ ಹಣದುಬ್ಬರ. ಇದನ್ನು ಸರಕಾರದ "ಆರ್ಥಿಕ ಸಮೀಕ್ಷೆ" ಕೂಡಾ ಒಪ್ಪಿಕೊಂಡಿದೆ.

1994-95ರ ಬಜೆಟ್ ಈ ಸಮಸ್ಯೆಗಳಿಗೆ ಏನು ಪರಿಹಾರ ಸೂಚಿಸುತ್ತದೆ? ಹಣಕಾಸು ಮಂತ್ರಿಗಳ ಪ್ರಕಾರ ಅಬಕಾರಿ ಸುಂಕ, ಕಸ್ಟಮ್ಸ್ ಸುಂಕ ಇತ್ಯಾದಿಗಳನ್ನು ಕಡಿಮೆ ಮಾಡಿರುವುದು ಈ ಉದ್ದೇಶದಿಂದಲೇ, -ಇದರಿಂದ ಜವಳಿ, ಪ್ಲಾಸ್ಟಿಕ್, ಸೌಂದರ್ಯವರ್ಧಕ, ಕಾಗದ, ತಂಪು ಪಾನೀಯ, ಕ್ಯಾಸೆಟ್ಟುಗಳ ಬೆಲೆ ಕಡಿಮೆಯಾಗಿ ಹಣದುಬ್ಬರ ಇಳಿಯುವುದಂತೆ! ಆದರೆ ಜನರನ್ನು ಮುಖ್ಯವಾಗಿ ಬಾಧಿಸುವ ಆಹಾರ ವಸ್ತುಗಳ ಬೆಲೆ ಇಳಿಸಲು? ರೇಶನ್ ವ್ಯವಸ್ಥೆಯನ್ನು ಬಲಪಡಿಸುವ ಯಾವುದೇ ಕ್ರಮದ ಬಗ್ಗೆ ಮನಮೋಹನಸಿಂಗ್‌ರವರು ಹೇಳಿಲ್ಲ, ಏಕೆಂದರೆ ಅವರ ಪ್ರಕಾರ ಈಗಾಗಲೇ ಅದು "ಬಲಿಷ್ಟ"ವಾಗಿದೆ! ಬಡವರಿಗೆ ಈ "ಬಲಿಷ್ಟ" ರೇಶನ್ ವ್ಯವಸ್ಥೆಯಲ್ಲಿ ಏನೆಲ್ಲಾ ಪಡೆಯಲು ಸಾಧ್ಯ, ಏಕೆ ಇದರಲ್ಲಿ 30 ಕೋಟಿ ಟನ್ ಆಹಾರ ಧಾನ್ಯ ಖರ್ಚಾಗದೆ ಉಳಿದಿದೆ ಎಂಬ ಕಹಿ ಅನುಭವ ಈಗಾಗಲೇ ಇರುವಾಗ ಈ ಬಜೆಟ್ ಹಣದುಬ್ಬರ, ಬೆಲೆಯೇರಿಕೆಯನ್ನು ತಡೆಯುತ್ತದೆ ಎಂದು ನಿರೀಕ್ಷಿಸುವುದು ಸಾಧ್ಯವೇ?

> ***ಕಳೆದ ಮೂರು ವರ್ಷಗಳಲ್ಲಿ ಜನಗಳ ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲೇ ಎಲ್ಲಕ್ಕಿಂತ ಹೆಚ್ಚಿನ ಏರಿಕೆಯಾಗಿದೆ ಎಂದು ಸರಕಾರವೇ ಒಪ್ಪಿಕೊಂಡಿದೆ. ಆದರೂ ಚಾಕೊಲೇಟ್, ತಂಪು ಪಾನೀಯ, ಪ್ಲಾಸ್ಟಿಕ್, ಸೌಂದರ್ಯವರ್ಧಕಗಳ ಮೇಲಿನ ಅಬಕಾರಿ, ಕಸ್ಟಮ್ಸ್ ಸುಂಕಗಳನ್ನು ಇಳಿಸಿ ಹಣದುಬ್ಬರ ಇಳಿಸುತ್ತೇವೆ ಎನ್ನುವವರಿಗೆ ಏನನ್ನೋಣ?***

...ಮನ ಕೊಟ್ಟಿರದ ಲೆಕ್ಕಾಚಾರ" ಎಂಬ ಸಂಪಾದಕೀಯದಲ್ಲಿ ...ುಬ್ಬರ ನಿಸ್ಸಂಶಯವಾಗಿಯೂ ನಾಗರಿಕ ಎದುರಿಸುತ್ತಿರುವ ಅತ್ಯಂತ ...ದ ಸಮಸ್ಯೆ. ದುರದೃಷ್ಟವಶಾತ್ ಅದನ್ನು ಎದುರಿಸಲು ಯಾವುದೇ ...ಂತ್ರವನ್ನು ಬಜೆಟ್ ತೋರಿಲ್ಲ" ಎಂದಿದೆ **"ಟೈಮ್ಸ್ ಆಫ್ ಇಂಡಿಯಾ"** ...ಗ್ಗದ ಜನಪ್ರಿಯತೆ ಗಿಟ್ಟಿಸುವ ಹಣಕಾಸು ಕಸರತ್ತಿಗೆ ಭಾರೀ ಬೆಲೆ ...ಕಾಗುತ್ತದೆ ಎಂದು ಇತಿಹಾಸ ನಮಗೆ ಕಲಿಸುತ್ತದೆ" ಎಂದು ಡಾ. ...ಮೋಹನಸಿಂಗ್ ನೀಡಿದ ಎಚ್ಚರಿಕೆಯನ್ನು ತಮ್ಮ ಸಹಯೋ... ... ಮತ್ತೊಮ್ಮೆ ಹೇಳುವುದು ಒಳ್ಳೆಯದು ಎಂದು ಈ ... ಅಂತಹುದೇ ಒಂದು ಕಸರತ್ತು ಎಂದು ತನ್ನ ...ದಕೀಯದ ಶಿರೋನಾಮೆಯಲ್ಲಿ ಸಾರಿದೆ ದಿಲ್ಲಿಯ ದೈನಿಕ ...ಸ್ ಮನ್'

...ಧಿಕಾರದಲ್ಲಿ ಉಳಿಯಲು ಕೊನೆಯ ಹತಾಶ ಪ್ರಯತ್ನ" ಎಂಬ ...ನಾಮೆಯ ಸುದ್ದಿ ಕೂಡಾ ಇದೇ ಪತ್ರಿಕೆಯಲ್ಲಿ ಪ್ರಕಟವಾ...ದು ಇದೇ ಬಜೆಟ್ ಕುರಿತಾದ ಸುದ್ದಿ

...ಗರೂಕತೆಯಿಂದ ಕೂಡಿದ ಕಾರ್ಯ ತಂತ್ರ'ವೆಂದು ಜಾಗರೂ...ದ ಹೇಳಿರುವ **"ಡೆಕ್ಕನ್ ಹೆರಾಲ್ಡ್"**ಗೂ ಈ ಬಜೆಟ್ಟಿನಲ್ಲಿ ...ರಣಾ ದೃಷ್ಟಿಕೋನ ಕಾಣಬಂದಿದೆ. "ಹಣಕಾಸು ಮಂತ್ರಿಗಳಿಗೆ ...ಪ್ರಸ್ತಾವಗಳನ್ನು ರೂಪಿಸಲು ಬಹಳಷ್ಟು ಅವಕಾಶವೇನೂ ಇರಲಿಲ್ಲ ...ಬೇಡಿಕೆಯನ್ನು ಪುನರುಜ್ಜೀವನಗೊಳಿಸಲು ಸಾರ್ವಜನಿಕ ವಲಯ ...ಂಡವಾಳ ವಿನಿಯೋಗವನ್ನು ಹೆಚ್ಚಿಸಬಾರದಿತ್ತು" ಎಂದು ಅದು

... ಬಾರಿಯ ಬಜೆಟ್ ಉದಾರ ನೀತಿಯ ಮತ್ತೊಂದು ಹಂತ ... **'ಪ್ರಜಾವಾಣಿ'** "....ಉದಾರ ಆರ್ಥಿಕ ನೀತಿಯ ಪರಿಣಾಮವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಸಾವಿನ ಪ್ರಮಾಣ ಅಥವಾ ಶಿಶು ಮರಣ ಪ್ರಮಾಣ ಇಳಿಮುಖವಾಗಿರುವುದು ಒಟ್ಟಾರೆ ಜೀವನಮಟ್ಟ ಸುಧಾರಣೆಯ ಲಕ್ಷಣ ಎಂದು ಸಚಿವರು ಹೇಳಿರುವುದನ್ನು ಯಾರೂ ಒಪ್ಪಲಾರರು" ಎಂದಿದೆ.

⊙ ನರಸಿಂಹರಾವ್ ಸರಕಾರದ ಉದಾರ ಆರ್ಥಿಕ ನೀತಿಯಿಂದಾಗಿ ಆರ್ಥಿಕ ಕ್ಷೇತ್ರದಲ್ಲಿ ಗಣನೀಯ ಸುಧಾರಣೆಯಾಗಿದೆ ಎಂದು ನಂಬಿದರೂ "ಈ ಅಭಿವೃದ್ಧಿಯ ಫಲ ಸಮಾಜದಲ್ಲಿ ಕೆಳಸ್ತರದಲ್ಲಿರುವವರಿಗೆ ತಲುಪಿಲ್ಲ ಎಂಬ ದೂರು ಇದ್ದೇ ಇದೆ. ಅದಕ್ಕೆ ಕಾಲಾವಕಾಶ ಬೇಕು ಎಂದು ಬಜೆಟ್ ಭಾಷಣದಲ್ಲಿ ಸಚಿವರು ಹೇಳಿರುವುದರಿಂದ ದೂರು ನೀಡಬೇಕೆಂದು ಒಪ್ಪಿಕೊಂಡಂತೆ ಆಯಿತಾದರೂ ಅದು ಸಮಜಾಯಿಷಿ ಆಗಲಾರದು" ಎಂದೂ **'ಪ್ರಜಾವಾಣಿ'** ಸಂಪಾದಕೀಯ ಅಭಿಪ್ರಾಯಪಡುತ್ತದೆ.

⊙ ಈ ಬಜೆಟ್ ಬಗ್ಗೆ ಅಸಮಾಧಾನವಾಗಿದ್ದರೂ 'ಸುಧಾರಣೆ'ಯನ್ನು ಕ್ರೋಢೀಕರಿಸುತ್ತದೆ, ಒಂದು ಸಣ್ಣ ಹೆಜ್ಜೆ ಮುಂದಕ್ಕೂ ಒಯ್ಯುತ್ತದೆ ಎನ್ನುವ **'ಫೈನಾನ್ಶಿಯಲ್ ಎಕ್ಸ್ ಪ್ರೆಸ್'** "ಮನಮೋಹನಸಿಂಗ್ ಕಾಲ ಬರಲಿ ಎಂದು ಕಾಯುವ ಬಜೆಟ್ ನೀಡಿದ್ದಾರೆ. ಕಳೆದ ವರ್ಷ ಉಕ್ಕೇರುತ್ತಿದ್ದ ಉತ್ಸಾಹವಿಲ್ಲ, ಸುಧಾರಣೆಗಳ ಅಬ್ಬರ ನಾಲ್ಕು ಪ್ರಮುಖ ರಾಜ್ಯಗಳಲ್ಲಿ ಚುನಾವಣಾ ಸೋಲಿನಿಂದಾದ ಗಾಂಭೀರ್ಯಕ್ಕೆ ಎಡೆ ಮಾಡಿಕೊಟ್ಟಿದೆ. ಎಕ್ಸಿಟ್ ಪಾಲಿಸಿ ಬಗ್ಗೆ ಮಾತಿಲ್ಲ, ಖಾಸಗೀಕರಣದ ಬಗ್ಗೆಯೂ ಇಲ್ಲ" ಎಂದು ಹಲುಬುವ ಈ ಸಂಪಾದಕೀಯಕ್ಕೂ ಹಣದುಬ್ಬರವನ್ನು ಆದ್ಯತೆಯ ಆಧಾರದ ಮೇಲೆ ಎದುರಿಸುತ್ತೇನೆನ್ನುವ ಹಣಕಾಸು ಮಂತ್ರಿಗಳ ಮಾತಿನಲ್ಲಿ ಭರವಸೆಯಿಲ್ಲ.

⊙ ಲೋಕಸಭಾ ಚುನಾವಣೆಯ ಒಂದು ವರ್ಷದ ಮೊದಲಿನ ಬಜೆಟ್ ಆಗಿರುವುದರಿಂದ, ಇದು ಇನ್ನೂ 'ಕೆಟ್ಟದಾಗಿರಬಹುದಾಗಿತ್ತು' ಹಾಗಾಗಿಲ್ಲ ಎಂಬ ಸಮಾಧಾನ **'ಇಂಡಿಯನ್ ಎಕ್ಸ್ ಪ್ರೆಸ್'**ಗೆ. 'ಮನಮೋಹನಸಿಂಗ್ ತನ್ನ ಆದ್ಯತೆಯ ಹಾಗೂ ನರಸಿಂಹರಾಯರ ಆದ್ಯತೆಗಳ ನಡುವೆ ಸಮತೋಲ ಕಾಪಾಡಲು ಪ್ರಯತ್ನಿಸಿದ್ದಾರೆ' ಎಂದು ಈ ಸಂಪಾದಕೀಯ ಹೇಳುತ್ತದೆ. ಅಂದರೆ ಐಎಂಎಫ್-ವಿಶ್ವ ಬ್ಯಾಂಕ್‌ಗೂ ಸಿಟ್ಟು ಬರಬಾರದು, ಇತ್ತ ಚುನಾವಣೆಗಳಲ್ಲಿ ಭಾರೀ ಹೊಡೆತ ನೀಡಿದ ಮತದಾರರೂ ಮಾತನಾಡದಂತಿರಬೇಕು ಎಂದು ಇದರ ಮರ್ಮವಿರಬಹುದೇ? ಆದರೆ ಈ ಸಮತೋಲನ ಹಣದುಬ್ಬರ ಹತೋಟಿಯಲ್ಲಿದ್ದರೆ ಮಾತ್ರ ಸಾಧ್ಯ ಎಂದೂ ಹೇಳುವ ಈ ಸಂಪಾದಕೀಯ **ಇದು ಒಂದು ದೊಡ್ಡ 'ರೇ'** ಎಂದೂ ಹೇಳಬೇಕಾಗಿ ಬಂದಿದೆ.

⊙ **'ಇಕನಾಮಿಕ್ ಟೈಮ್ಸ್'** ಕೂಡಾ ಇದೊಂದು ಚುನಾವಣಾ ಬಜೆಟ್ ಎಂದಿದೆ. ಇದು ಇತ್ತೀಚಿನ ಬಜೆಟ್ ಗಳಲ್ಲಿ ಅತ್ಯಂತ ಚತುರ ಬಜೆಟ್, ಆದರೆ "ಬೇಜವಾಬ್ದಾರಿಯದಲ್ಲ" ಎಂಬ ಸರ್ಟಿಫಿಕೇಟ್ ನೀಡಲು ಅದು ಮರೆತಿಲ್ಲ. "ಸಾಮಾಜಿಕ ವಲಯಗಳಿಗೆ ಅವರು ನೀಡಿರುವ ಹಣ ನಿಜ ಬೆಲೆಯಲ್ಲಿ ಕಮ್ಮಿಯಾಗಿದೆ ಎಂದು ಬಹಳ ಜನ ಗಮನಿಸುವುದಿಲ್ಲ, ಗ್ರಾಮೀಣ ಅಭಿವೃದ್ಧಿಗೆ ಶೇ. 16 ಹೆಚ್ಚಳ, ಒಟ್ಟಾರೆಯಾಗಿ ಯೋಜನಾ ವೆಚ್ಚದಲ್ಲಿ ಮಾಡಿರುವ ಶೇ. 15ಕ್ಕಿಂತ ತುಸು ಹೆಚ್ಚಷ್ಟೇ" ಎಂದೂ ಅದು ಹೇಳುತ್ತದೆ. ಬಹುಶಃ ಇದು "ಬೇಜವಾಬ್ದಾರಿತನವಲ್ಲ"! ವಂಚನೆಯೆನ್ನಬಹುದೇ?

ದೇಶದೊಳಗೆ



ಅರುಣ್ ಝಾ, ಜಿಲ್ಲಾ ಪೋಲೀಸ್ ಮುಖ್ಯಸ್ಥ (ಎಸ್.ಪಿ.) ಕೆ.ಎಸ್. ದ್ವಿವೇದಿ, ಡಿ.ಐ.ಜಿ. ಜಗತ್ ಬಂಧು ಮಹಾಪಾತ್ರ ಮತ್ತು ಐಜಿಪಿ ಜಿ.ಪಿ. ದೊತ್ರೆ ಸೇರಿದ್ದಾರೆ (ತನಿಖಾ ಆಯೋಗದ ಕಟು ಟೀಕೆಗೆ ಒಳಗಾಗಿರುವ ದೊತ್ರೆ ಕೆಲ ದಿನಗಳ ಹಿಂದಷ್ಟೆ ಬಿಹಾರ ರಾಜ್ಯದ ಹೊಸ ಪೋಲೀಸ್ ಇನ್ಸಪೆಕ್ಟರ್ ಜನರಲ್ ಆಗಿ ಅಧಿಕಾರ ಸ್ವೀಕರಿಸಿದ್ದಾರಂತೆ).

ಗಂಭೀರವಾದ ಕೋಮು ವಿದ್ವೇಷ ವಾತಾವರಣವನ್ನು ಅಂದಿನ ಜಿಲ್ಲಾ ಆಡಳಿತ ಹಗುರುವಾಗಿ ಪರಿಗಣಿಸಿದ್ದೇ ಭಯಾನಕ ಪರಿಸ್ಥಿತಿ ಆರಂಭವಾಗಿದ್ದರಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸರಕಾರಕ್ಕೆ ಸಾಧ್ಯವಾಗಿಲ್ಲ.

ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡು ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಕಾದು ನೋಡಬೇಕಾಗಿದೆ.

ಗುಜರಾತಿನಲ್ಲಿ ಬಿಜೆಪಿ ಗೂಂಡಾಗಿರಿ

ಗುಜರಾತಿನಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುತ್ತಲೇ ಆ ಪಕ್ಷದ ಕಾರ್ಯಕರ್ತರ ಗೂಂಡಾ ಪ್ರವೃತ್ತಿಯೂ ಬಹಿರಂಗಕ್ಕೆ ಬಂದಿದೆ. ಅದರ ರುಚಿಯನ್ನು ಉಂಡವರಲ್ಲಿ ಪತ್ರಕರ್ತರು ಮೊದಲಿಗರು.

ಮಾರ್ಚ್ 14 ರಂದು ಕೇಶುಭಾಯಿ ಪಟೇಲ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದ ವರದಿಗಾಗಿ ಹೋಗಿದ್ದ ಪತ್ರಕರ್ತರ ಮೇಲೆ ಬಿಜೆಪಿ ಸ್ವಯಂ ಸೇವಕರು ಹಲ್ಲೆ ನಡೆಸಿದರು. ಹಾಗೂ ಹೀನಾಮಾನವಾಗಿ ಬಯ್ದರು. ಕೆಲವು ಹಿರಿಯ ಪತ್ರಕರ್ತರಿಗೆ ಗಾಯಗಳೂ ಆದವು. ಒಬ್ಬರ ಅಂಗಿ ಹರಿಯಿತು.

ಕೆಲವು ಪತ್ರಿಕಾ ಛಾಯಾಗ್ರಾಹಕರೂ ಹಲ್ಲೆಗೆ ಒಳಗಾದರು. ಇಷ್ಟೆಲ್ಲಾ ನಡೆಯುತ್ತಿದ್ದರೂ ಸ್ಥಳದಲ್ಲಿದ್ದ ಬಿಜೆಪಿ ನಾಯಕರು ಕಾರ್ಯಕರ್ತರನ್ನು ನಿಯಂತ್ರಿಸಲು ಮುಂದಾಗಲೇ ಇಲ್ಲ. ಹಿರಿಯ ಪೋಲೀಸ್ ಅಧಿಕಾರಿಯೊಬ್ಬರು ಬಿಜೆಪಿ ಕಾರ್ಯಕರ್ತರ ಭಯದಿಂದಾಗಿ ಪತ್ರಕರ್ತರ ಮೇಲೆ ಹಲ್ಲೆ ಮಾಡಿದರು.

ಸಹೋದ್ಯೋಗಿಗಳ ಮೇಲೆ ನಡೆದ ಹಲ್ಲೆಯನ್ನು ಪ್ರತಿಭಟಿಸಿ ಪತ್ರಕರ್ತರು ಪ್ರಮಾಣವಚನ ಸಮಾರಂಭವನ್ನು ಬಹಿಷ್ಕರಿಸಿದರು.

ಈ ಪ್ರಕರಣ ಗುಜರಾತಿನಲ್ಲಿ ಮುಂದೆ ಬರಲಿರುವ ಕರಾಳ ದಿನಗಳ ಸೂಚನೆ ಎನ್ನಬಹುದೇನೋ.

ಸರ್ಕಾರದ ನಿರ್ಲಕ್ಷ್ಯದಿಂದ ಕೋಮುಗಲಭೆ: ತನಿಖಾ ಆಯೋಗ

ಬಿಹಾರದ ಭಾಗಲ್ಪುರದಲ್ಲಿ 1989 ಅಕ್ಟೋಬರ್ ನಲ್ಲಿ ಆರಂಭವಾಗಿ ಹಲವು ದಿನಗಳ ಕಾಲ ಮುಂದುವರಿದ ಭೀಕರ ಕೋಮು ದಳ್ಳುರಿಗೆ ಅಂದಿನ ಸರ್ಕಾರದ ನಿಷ್ಕ್ರಿಯತೆ ಹಾಗೂ ಅಧಿಕಾರಿಗಳು ಶಾಮೀಲಾಗಿದ್ದುದೇ ಕಾರಣ.

2200 ಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡ ಆ ಅಮಾನುಷ ಕೃತ್ಯಗಳ ತನಿಖೆಗಾಗಿ ನೇಮಕಗೊಂಡಿದ್ದ ಆಯೋಗವೇ ಅಂದಿನ ಸರ್ಕಾರವನ್ನು ಕಟುವಾಗಿ ಟೀಕಿಸಿದೆ. ಸತ್ಯೇಂದ್ರ ನಾಥ ನಾರಾಯಣ ಸಿನ್ಹ ನೇತೃತ್ವದ ಕಾಂಗ್ರೆಸ್ (ಐ) ಸರಕಾರ ಆಗ ಆಡಳಿತದಲ್ಲಿತ್ತು.

ನ್ಯಾಯಮೂರ್ತಿ ರಾಮನಾರಾಯಣ ಪ್ರಸಾದ್, ನ್ಯಾ. ರಾಮಚಂದ್ರ ಪ್ರಸಾದ್ ಮತ್ತು ಬಿ.ಎಸ್. ಷಂಪುಲ್ ಹಸನ್ ಅವರುಳ್ಳ ಆಯೋಗ ರಾಜ್ಯ ಸರ್ಕಾರಕ್ಕೂ ತನ್ನ ವರದಿಯನ್ನು ಸಲ್ಲಿಸಿದೆ.

ಭಾಗಲ್ಪುರ ಜಿಲ್ಲೆಯ ಆಗಿನ ಪೋಲೀಸ್ ಅಧಿಕಾರಿಗಳು ಮುಸ್ಲಿಂ ವಿರೋಧಿಗಳಾಗಿ ವರ್ತಿಸಿ ಅಪಾಯದಲ್ಲಿದ್ದ ಮುಸ್ಲಿಮರಿಗೆ ರಕ್ಷಣೆ ಕೊಡಲಿಲ್ಲ ಎಂದು ವರದಿ ಕಟುವಾಗಿ ಟೀಕಿಸಿದೆ. ಅದು ಕೆಲವು ಅಧಿಕಾರಿಗಳ ಹೆಸರನ್ನು ತಿಳಿಸಿ ಕೋಮುಗಲಭೆ ಹೊತ್ತು ಉರಿಯಲು ಇವರೂ ಕಾರಣಕರ್ತರು ಎಂದಿದೆ. ಆ ಅಧಿಕಾರಿಗಳಲ್ಲಿ ಅಂದಿನ ಜಿಲ್ಲಾಧಿಕಾರಿ ಉಂಟಾಗಲು ಕಾರಣ ಎಂದು ವರದಿ ಹೇಳಿದೆ.

ವಿಶೇಷವಾಗಿ ಎಸ್ಪಿ ಕೆ.ಎಸ್. ದ್ವಿವೇದಿ ಮುಸ್ಲಿಂ ವಿರೋಧಿ ಭಾವನೆ ತಳೆದಿದ್ದರು ಎಂದು ವರದಿ ಸ್ಪಷ್ಟವಾಗಿ ಹೇಳಿದೆ.

1989 ಅಕ್ಟೋಬರ್ 24 ರಂದು ರಾಮಶಿಲಾ ಪೂಜನದ ಮೆರವಣಿಗೆಯಲ್ಲಿದ್ದ ಹಿಂದೂ ಕೋಮುವಾದಿಗಳು ಮುಸ್ಲಿಮರೊಂದಿಗೆ ಜಗಳಕ್ಕಿಳಿದಿದ್ದರಿಂದ ಕೋಮುದಳ್ಳುರಿ ಹೊತ್ತಿಕೊಂಡಿತ್ತು. ಇದೊಂದು ಪೂರ್ವಯೋಜಿತ ಆಕ್ರಮಣ ಆಗಿತ್ತು.

ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಳ್ಳದ ಅಂದಿನ ಕಾಂಗ್ರೆ ಸರ್ಕಾರ ವಿಧಾನ ಸಭೆ ಚುನಾವಣೆಯ ಗುಂಗಿನಲ್ಲಿ ಮುಳುಗಿತ್ತೇ ಹೊರತು ಕೈಮೀರುತ್ತಿರುವ ಪರಿಸ್ಥಿತಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಿಲ್ಲ ಎಂದು ಆಯೋಗ ಛೀಮಾರಿ ಹಾಕಿದೆ.

ಕ್ರಮಕ್ಕೆ ತೊಡಕು

ಭಾಗಲ್ಪುರದಲ್ಲಿ ಆರಂಭವಾಗಿ 1990ರ ಜನವರಿವರೆಗೂ ಜಿಲ್ಲೆಯ ಹಲವು ಭಾಗಗಳಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ ಘೋರ ಕೋಮುದಳ್ಳುರಿ ಕುರಿತು ಆಯೋಗ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಜನತಾದಳ ಸರಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಆದರೆ ಆದಾಗಲೇ ಅಸೆಂಬ್ಲಿ ಚುನಾವಣೆ ಕಾರ್ಯ

ಇತ್ತೀಚಿನ ವಿಧಾನಸಭಾ ಚುನಾವಣೆಗಳ ಬಗ್ಗೆ

⊙ ದುರದೃಷ್ಟವಶಾತ್ ಆಂಧ್ರ ಮತ್ತು ಕರ್ನಾಟಕ ತೀರ್ಪಿನಿಂದ ಕೇಂದ್ರ ಸರಕಾರ ತಪ್ಪು ಪಾಠಗಳನ್ನೇ ಕಲಿತಂತಿದೆ. ಕೇವಲ ಬಡತನ ಎದುರಿಸಲು ಹೊಸ ಇಲಾಖೆಗಳನ್ನು ಸೃಷ್ಟಿಸುವುದು ಸಬ್ಸಿಡಿ ಹೆಚ್ಚಿಸುವುದು, ಗ್ರಾಮೀಣ ಅಭಿವೃದ್ಧಿ ಖರ್ಚು ಹೆಚ್ಚಳ ಇದಕ್ಕೆ ಉತ್ತರವಲ್ಲ, ವಾಸ್ತವ ಸಂಗತಿಯೆಂದರೆ ಸರಕಾರದ ಇಡೀ ಆರ್ಥಿಕ ನೀತಿ ಬಂಡವಾಳ ತೊಡಗಿಸುವವರ ಪರವಾಗಿದೆಯೇ ಹೊರತು ಪಟ್ಟಭದ್ರ ಹಿತಾಸಕ್ತಿಗಳಿಗೆ ಸವಾಲು ಹಾಕುವಂತೆ ಅಥವಾ ಬಡವರ, ಉದ್ಯಮಶೀಲರ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಕಾಣಿಸುತ್ತಿಲ್ಲ. ಆರ್ಥಿಕ ನೀತಿಯನ್ನು ಮತದಾರರು ಬೆಂಬಲಿಸಬೇಕಾದರೆ ಉತ್ಪಾದಕತೆ, ಉದ್ಯೋಗಾವಕಾಶ, ಹಣದುಬ್ಬರವಿಲ್ಲದ ಬೆಳವಣಿಗೆ ಹೆಚ್ಚಿಸುವ ಗುರಿಯಿಟ್ಟುಕೊಳ್ಳಬೇಕು, ಕೇವಲ ಖಾಸಗೀ ಬಂಡವಾಳ ಹೂಡಿಕೆದಾರರಿಗೆ ಪ್ರತಿಫಲ ದೊರಕಿಸುವುದು ಮಾತ್ರವಲ್ಲ.

-ಟೈಮ್ಸ್ ಆಫ್ ಇಂಡಿಯಾ

⊙ ಕರ್ನಾಟಕ ಆಂಧ್ರದಲ್ಲಾದಂತೆ ಕಾಂಗ್ರೆ ಈ ಪಣದಲ್ಲೂ ಸೋತಿದೆ. ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ಕಾಂಗ್ರೆನ ಸಾಧನೆ ಅದಕ್ಕೆ ಆಗಿರುವ ಮುಖಭಂಗದ ಹೆಗ್ಗುರುತು... ರಾಷ್ಟ್ರವ್ಯಾಪಿ ಅದರ ಜನಾಧಾರಣೆ ಕುಗ್ಗುತ್ತಿದೆ ಎಂಬುದನ್ನು ಈ ಚುನಾವಣೆಗಳು ಸಾಬೀತುಪಡಿಸಿರುವುದನ್ನು ಕಡೆಗಣಿಸಲಾಗದು.

-ಪ್ರಜಾವಾಣಿ

⊙ ಮೂರು ಬಾರಿ ಸೋಲಿನ ಪುನರಾವರ್ತನೆಯೆಂದರೆ ಅದರರ್ಥ ಒಂದೇ-ಸೋತವರು ಇನ್ನು ಮುಂದೆ ಅಪ್ರಸ್ತುತ ಎಂದು. ಕಾಂಗ್ರೆಸ್ 1991ರಲ್ಲಿ ಸಂಸದೀಯ ಚುನಾವಣೆಯ ನಂತರ ಮೂರನೇ ಬಾರಿ ವಿಧಾನಸಭಾ ಚುನಾವಣೆ ಸೋಲುತ್ತಿದೆ.

-ಫೈನಾನ್ಶಿಯಲ್ ಎಕ್ಸ್ ಪ್ರೆಸ್

⊙ ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಕಾಂಗ್ರೆಸ್‌ನ ಸಂಪೂರ್ಣ ಪರಾಭವ ಪಕ್ಷದ ಮುಖಂಡತ್ವ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ... ಕಾಂಗ್ರೆಸ್‌ನ ಸೋಲಿಗೆ ಕಾರಣವನ್ನು ಪಕ್ಷದ ಶಿಸ್ತಿನ ಬಗ್ಗೆ ಈಗಿರುವ ಮಾನದಂಡಕ್ಕಿಂತ ವಿಶಾಲವಾದ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಾಗುತ್ತದೆ.

-ಎನ್.ಡಿ.ತಿವಾರಿ
ಕಾಂಗ್ರೆ ಮುಖಂಡರು

⊙ ಅಧಿಕಾರಾರೂಢರ ವಿರುದ್ಧ ಹಾಗೂ ಕಾಂಗ್ರೆಸ್ ನ ವಿರುದ್ಧ ಇರುವ ಭಾವನೆಗಳು ಗುಜರಾತಿನಲ್ಲಿ ಈ ಬದಲಾವಣೆ ತಂದಿವೆ. ಅಲ್ಲಿ ಬಿಜೆಪಿ-ಪರ ಅಲೆಯೇನೂ ಇರಲಿಲ್ಲ.

-ಅಟಲ್ ಬಿಹಾರಿ ವಾಜಪೇಯಿ
ಬಿಜೆಪಿ ಮುಖಂಡರು

⊙ ಕಾಂಗ್ರೆಸ್ಸನ್ನು ಕೇಂದ್ರದಿಂದ ಇಳಿಸುವ ಕಾರ್ಯ ಆರಂಭವಾಗಿದೆ. ಇದರ ಖ್ಯಾತಿ ಬಾಳಠಾಕ್ರೆಗೆ ಮತ್ತು ನಮ್ಮ ಮೈತ್ರಿಕೂಟಕ್ಕೆ ಸಲ್ಲಬೇಕು

-ಎಲ್.ಕೆ.ಅಡ್ವಾಣಿ
ಬಿಜೆಪಿ ಮುಖಂಡರು

⊙ ಪಶ್ಚಿಮ ಭಾರತದ ತೀರ್ಪು ಅಧಿಕಾರದಲ್ಲಿದ್ದ ಸರಕಾರಗಳ ಅಸಾಮರ್ಥ್ಯತೆ ಹಾಗೂ ಭ್ರಷ್ಟಾಚಾರದ ವಿರುದ್ಧ ಮತಕ್ಕಿಂತ ಹೆಚ್ಚಾಗಿ ಬಿಜೆಪಿಯ ಪರವಾದ ಅದರ ಬ್ರಾಂಡಿನ ಕೋಮುವಾದಿ ರಾಜಕೀಯಕ್ಕೆ ಪರವಾದ ಮತ ಎಂದು ಪರಿಗಣಿಸಲು ಕಾರಣವೇನೂ ಇಲ್ಲ, ಆದ್ದರಿಂದ ಮತದಾರ ಬಿಜೆಪಿಯ ಕೋಮುವಾದಿ ದಾಖಲೆಗಳನ್ನು ಮರೆತಿದ್ದಾನೆ, ಮತ್ತೆ ಅದರ ಮಡಿಲಿಗೆ ಬರಲಿಚ್ಛಿಸುತ್ತಾನೆ ಎಂದು ಭಾವಿಸುವುದು ತಪ್ಪಾದೀತು. ಬಹುಶಃ ಬಿಜೆಪಿಯ ಮುನ್ನಡೆಯನ್ನು ತಡೆಯಲು ಒಂದು ವಿಶ್ವಾಸಾರ್ಹ ಜಾತ್ಯಾತೀತ ಪರ್ಯಾಯವನ್ನು ಮತ್ತೆ ಎತ್ತಿ ಹಿಡಿಯುವ ಸಮಯವೀಗ ಬಂದಿದೆ ಎಂದು ಹೇಳುವುದೇ ಸರಿಯಾದದ್ದು.

-ಟೈಮ್ಸ್ ಆಫ್ ಇಂಡಿಯಾ

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆ

ಬಳ್ಳಾರಿಯಲ್ಲಿ 17 ಕಡೆ ಸ್ಪರ್ಧೆ

ಬಳ್ಳಾರಿ: ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯತಿ ಚುನಾವಣೆಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಿಪಿಐ(ಎಂ) 17 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿದೆ. ಅದರಲ್ಲಿ 14 ತಾಲೂಕು ಪಂಚಾಯತಿ ಕ್ಷೇತ್ರಗಳು 5 ತಾಲೂಕುಗಳಲ್ಲಿ ವಿಸ್ತರಿಸಿದೆ. ಹಾಗೂ 3 ಜಿಲ್ಲಾ ಪಂಚಾಯತಿ ಕ್ಷೇತ್ರಗಳು ಬಳ್ಳಾರಿ, ಹಗರಿಬೊಮ್ಮನ ಹಳ್ಳಿ ತಾಲೂಕುಗಳಲ್ಲಿವೆ.

ಜಿಲ್ಲಾ ಪಂಚಾಯತಿ ಅಭ್ಯರ್ಥಿಗಳು ಯು. ಬಸವರಾಜು (ಎಮ್ಮಿಗನೂರು), ಎಸ್. ಶಿವ ಶಂಕರ (ಕುರುಗೋಡು) ಹಾಗೂ ಕುಮಾರಿ ಶ್ರೀಮತಿ (ಹಗರಿಬೊಮ್ಮನಹಳ್ಳಿ).

ಮೈಸೂರು ಜಿಲ್ಲೆಯಲ್ಲಿ

ಮೈಸೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವು ಕೊಳ್ಳೆಗಾಲ ತಾಲೂಕಿನಲ್ಲಿ ಎರಡು ತಾಲೂಕು ಪಂಚಾಯತಿ ಸ್ಥಾನಗಳಿಗೂ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಒಂದು ಜಿಲ್ಲಾ ಪಂಚಾಯತ್ ಸಮಿತಿಗೂ ಇನ್ನೊಂದು ತಾಲೂಕು ಪಂಚಾಯತಿ ಸಮಿತಿಗೂ ಮತ್ತು ಹುಣಸೂರಿನಲ್ಲಿ ಒಂದು ತಾಲೂಕು ಪಂಚಾಯತಿ ಸಮಿತಿಗೂ ಸ್ಪರ್ಧಿಸಿದೆ.

ಪಕ್ಷವು ಮೊದಲ ಬಾರಿಗೆ ಕೊಳ್ಳೆಗಾಲದಲ್ಲಿ ಈ ಪಂಚಾಯತಿ ಸಮಿತಿಗಳಿಗೆ ಸ್ಪರ್ಧಿಸಿರುವುದಾದರೂ ಅದರ ಪ್ರಚಾರದ ಶೈಲಿಯನ್ನು ಕಂಡು ಮತದಾರರು ಮೆಚ್ಚಿದ್ದಾರೆ. ಕೆಂಪು ಬಾವುಟಗಳನ್ನು ಹಿಡಿದು ಜನಪರ ಘೋಷಣೆಗಳನ್ನು ಮಾಡುತ್ತಾ ಹತ್ತು ಹನ್ನೆರಡು ಕಾರ್ಯಕರ್ತರು ಗುಂಪಾಗಿ ಮತ ಯಾಚಿಸುತ್ತಾ ಹೋಗುವಾಗ ಬೀದಿ ಬೀದಿಗಳಲ್ಲಿಜನರು ಹೆಂಗಸರೂ, ಮಕ್ಕಳೂ ಕೂಡಿ ಕಾರ್ಯಕರ್ತರು ಅಲ್ಲಲ್ಲಿ ನಿಂತು ಮಾಡುವ ಪುಟ್ಟ ಭಾಷಣಗಳನ್ನು ಕೇಳಿ ಸ್ಥಳೀಯ ಸಮಸ್ಯೆಗಳನ್ನು ಸಂಕಷ್ಟಗಳನ್ನು ಹೇಳುತ್ತಿದ್ದರು. ಕಾರ್ಯಕರ್ತರು ಸಣ್ಣ ಬ್ಯಾಟರಿ ಮೈಕನ್ನು ಹೆಗಲಿಗೆ ಹಾಕಿಕೊಂಡು ಪ್ರಚಾರ ಭಾಷಣಗಳನ್ನು ಮಾಡುತ್ತಿದ್ದರು. ಈ ರೀತಿಯ ಪ್ರಚಾರ ಯಾವು ಪಕ್ಷವೂ ಮಾಡಲಿಲ್ಲ.

ಮತದಾರರಿಗೆ ಪಕ್ಷದ ಹುಟ್ಟು ಬೆಳವಣಿಗೆ ಅದರ ಹೋರಾಟಗಳು ಅದರ ವರ್ಗಗುಣಗಳನ್ನು ಸಂಕ್ಷಿಪ್ತವಾಗಿ ಕಾರ್ಯಕರ್ತರು ಹೇಳುತ್ತಿದ್ದರು. ಪಶ್ಚಿಮ ಬಂಗಾಳದ ಸಾಧನೆಯನ್ನು ವಿವರಿಸುತ್ತಿದ್ದರು.

ರಾಮಾಪುರದ ಕ್ಷೇತ್ರದಿಂದ ತಾಲೂಕು ಪಂಚಾಯತಿ ಸಮಿತಿಗೆ ಸ್ಪರ್ಧಿಸಿರುವ ಕೃಷ್ಣಾ ಭೋವಿ ಮತ್ತು ಲೊಕ್ಕನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿರುವ ಎಸ್.ಷಣ್ಮುಗರವರು ನಾವು ಗೆದ್ದರೂ, ಅಥವಾ ಸೋತರು ನಿಮ್ಮ ಸಮಸ್ಯೆಗಳಿಗೆ ಪಕ್ಷದ ನೇತೃತ್ವದಲ್ಲಿ ಹೋರಾಟ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಡುತ್ತಿದ್ದರು. ಅನೇಕರು ನಮ್ಮ ಪಕ್ಷಕ್ಕೆ ಬೆಂಬಲವನ್ನು ಸೂಚಿಸಿದರು.

ಹೆಚ್.ಡಿ.ಕೋಟೆಯಲ್ಲಿ ಬಿರುಸಿನ ಪ್ರಚಾರ

ಮೈಸೂರು ಜಿಲ್ಲೆಯ ಹಿಂದುಳಿದ ತಾಲೂಕಿನಲ್ಲಿ ಒಂದಾದ ಹೆಚ್.ಡಿ.ಕೋಟೆಯಲ್ಲಿ ಹತ್ತಾರು ವರ್ಷಗಳ ಹಿಂದೆ ಪಕ್ಷವನ್ನು ಹುಟ್ಟು ಹಾಕಿದವರು ಹತ್ತಿರದ ಕೇರಳ, ತಮಿಳುನಾಡು ರಾಜ್ಯ ಗಳಿಂದ ಉದ್ಯೋಗ ಹುಡುಕಿಕೊಂಡು ಬಂದು ನೆಲೆ ನಿಂತ ಸಂಗಾತಿಗಳು ಪ್ರಾಂತ ರೈತ ಸಂಘದ ಘಟಕವೊಂದನ್ನು ರಚಿಸುವ ಮೂಲಕ ನಂತರ ಎಸ್‌ಎಫ್‌ಐ-ಡಿವೈಎಫ್‌ಐ ಸಂಘಟನೆಗಳ ಮೂಲಕ ಪಕ್ಷಕ್ಕೆ ಆಕರ್ಷಿತರಾದವರು. ಕೆಲವು ಯುವಕರು ಕಳೆದ ಏಳೆಂಟು ವರ್ಷಗಳಲ್ಲಿ ಸತತವಾಗಿ ಜನರ ನಡುವೆ ಕೆಲಸ ಮಾಡಿದುದರ ಫಲವಾಗಿ ಈ ಬಾರಿ ಅಕ್ಬರ್ ಪಾಷಾ, ಹೆಚ್.ಡಿ. ಕೋಟೆ ಕಸಬಾ ಕ್ಷೇತ್ರದಿಂದ ಜಿಲ್ಲಾ ಪಂಚಾಯಿತಿಗೂ ಮಾರುತಿ ಪಡುಕೋಟೆ ಕಾವಲ್ ಕ್ಷೇತ್ರದಿಂದ ತಾಲೂಕು ಪಂಚಾಯತಿಗೂ ಸ್ಪರ್ಧಿಸುತ್ತಿದ್ದಾರೆ.

ನೂರಾರು ಯುವಕರು ಮತ್ತು ಕೆಲವೊಂದು ಗ್ರಾಮ ಪಂಚಾಯತಿಯ ಸದಸ್ಯರು ಪಕ್ಷಬೇಧವನ್ನು ಮರೆತು ಅಕ್ಬರ್ ಪಾಷಾ ಮತ್ತು ಮಾರುತಿ ಅವರ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಫೆಬ್ರುವರಿ ತಿಂಗಳಲ್ಲಿ ಪಕ್ಷದ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ಮುಗಿಸಿದ್ದು ಚುನಾವಣೆಯ ನಂತರ ಹೊಸ ಕಾರ್ಯಕರ್ತರಿಗೆ ಸೈದ್ಧಾಂತಿಕ ತರಬೇತಿ ನೀಡಿ, ಎಸ್‌ಎಫ್‌ಐ, ಡಿವೈಎಫ್‌ಐ ಪ್ರಾಂತ ರೈತ ಸಂಘಟನೆಗಳನ್ನು ವಿಸ್ತರಿಸಿ ಪಕ್ಷವನ್ನು ಬೆಳೆಸುವ ಹಂಬಲವನ್ನು ಪಕ್ಷದ ಹೆಚ್.ಡಿ. ಕೋಟೆ ತಾಲೂಕು ಸಮಿತಿ ಇಟ್ಟುಕೊಂಡಿದ್ದು. ಈ ನಿಟ್ಟಿನಲ್ಲಿ ಈಗ ನಡೆಯುತ್ತಿರುವ ಚುನಾವಣೆಯೂ ನೆರವಾಗವುದು ಎಂಬ ನಿರೀಕ್ಷಿಸಲಾಗಿದೆ.

ಡಿ.ವೈ.ಎಫ್.ಐ. ಗ್ರಾಮ ಘಟಕ

ಚಾಮರಾಜನಗರ ತಾಲೂಕು ಸಪ್ಪಯ್ಯನಪುರ ಗ್ರಾಮದಲ್ಲಿ ಮಾರ್ಚ್ 4ರಂದು ಡಿವೈಎಫ್‌ಐ ಗ್ರಾಮ ಸಮಿತಿಯೊಂದು ರಚನೆಯಾಗಿದೆ. ಮೈಸೂರು ಜಿಲ್ಲಾ ಡಿವೈಎಫ್‌ಐಸದಸ್ಯ ಹಾಗೂ ಮೈಸೂರು ನಗರ ಸಮಿತಿಯ ಕಾರ್ಯದರ್ಶಿ ಹೆಚ್.ಎಸ್.ಜಗದೀಶ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ನೂರಾರು ಯುವಜನರು ಉತ್ಸಾಹಿ ಯುವಕರು ಗ್ರಾಮದ ಒಳಿತಿಗಾಗಿ ಡಿವೈಎಫ್‌ಐ ಗೆ ಸದಸ್ಯರಾದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಸಮಿತಿ ಸದಸ್ಯ ಹೆಚ್.ಎಸ್.ಜಗದೀಶ್‌ರವರು ಡಿವೈಎಫ್‌ಐನ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಭೋಗಾಪುರ ಗ್ರಾಮ ಪಂಚಾಯ್ತಿ ಸದಸ್ಯೆ ಮಹದೇವಮ್ಮನವರು ಡಿವೈಎಫ್‌ಐನ ಧ್ಯೇಯೋದ್ದೇಶಗಳನ್ನು ಮೆಚ್ಚಿ, ಡಿವೈಎಫ್‌ಐಗೆ ಸೇರಿದರು. ಕೊನೆಯಲ್ಲಿ ಸಪ್ಪಯ್ಯನಪುರ ಗ್ರಾಮದಿಂದ ಡಿ ವೈಎಫ್‌ಐ ಘಟಕ ಪದಾಧಿಕಾರಿಗಳನ್ನು ಆರಿಸ ಲಾಯಿತು. ಅಧ್ಯಕ್ಷರಾಗಿ ನಂಜುಂಡೇ ಗೌಡ, ಪುಟ್ಟನಂಜಯ್ಯ, ಸಿದ್ದಯ್ಯ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಶಿವಕುಮಾರ್, ಮರಿಸ್ವಾಮಿ ಸಹಕಾರ್ಯದರ್ಶಿ ನಾಗಪ್ಪ ಸಂಘಟನಾ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ಶಂಕರೇಗೌಡ ಹಾಗೂ 7 ಜನ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿತು

ಎಸ್.ಎಫ್.ಐ. ಮಂಡ್ಯ ಜಿಲ್ಲಾ ಸಮ್ಮೇಳನ

ಮಂಡ್ಯಾ: ಜಿಲ್ಲೆಯ ಖ್ಯಾತ ಸಾಹಿತಿ ಪ್ರೊ. ಹೆಚ್.ಎಲ್. ಕೇಶವಮೂರ್ತಿಯವರ ನೇತೃತ್ವದಲ್ಲಿ ನಡೆದ ಸಿದ್ಧತೆಯೊಂದಿಗೆ ಆರಂಭವಾದ ಸಮ್ಮೇಳನದಲ್ಲಿ ಎಸ್.ಎಫ್.ಐ.ನ ಜಿಲ್ಲಾ ಅಧ್ಯಕ್ಷರಾದ ಕಾಂ. ಎನ್.ಸಿ. ಭರತ್ ರಾಜ್ ರವರು ಧ್ವಜಾರೋಹಣ ಮಾಡಿದರು. ನಂತರ ಸುಮಾರು 500 ರಷ್ಟಿದ್ದ ವಿದ್ಯಾರ್ಥಿಗಳು ಉದ್ಘಾಟನಾ ಸಮಾರಂಭಕ್ಕೆ ರೈತ ಸಭಾಂಗಣಕ್ಕೆ ಬಂದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಹೆಚ್.ಸಿ. ಕೇಶವಮೂರ್ತಿ ವಹಿಸಿದ್ದರು. ಅತಿಥಿಗಳಾಗಿ ಶಾಂತಾರಾಮ ನಾಯಕ್ (ಎಸ್.ಎಫ್.ಐ ರಾಜ್ಯಾಧ್ಯಕ್ಷ) ಕಾಂ. ಜಿ. ರಾಮಕೃಷ್ಣ, ಎನ್.ಸಿ. ಭರತ್ ರಾಜ್, ಉಪಸ್ಥಿತರಿದ್ದು ಉದ್ಘಾಟನೆಯನ್ನು ಪ್ರೊ. ಕೆ. ರಾಮದಾಸ್ ನೆರವೇರಿಸಿ ಜಾತ್ಯಾತೀತತೆಯನ್ನು ಬೆಳೆಸಲು ಎಡವಿದ್ಯಾರ್ಥಿ ಚಳುವಳಿ ಬಲಗೊಳ್ಳಬೇಕು ಆ ನಿಟ್ಟಿನಲ್ಲಿ ಎಸ್.ಎಫ್.ಐ. ಮುಂದುವರಿಯುತ್ತಿದೆ ಎಂದರು. ಶಾಂತಾರಾಂ ನಾಯಕ್ ಎಸ್.ಎಫ್.ಐ. ನ ಕ್ರಾಂತಿಕಾರಿ ಪರಂಪರೆಯನ್ನು ತಿಳಿಸಿದರು.

ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪ್ರತಿನಿಧಿ ಕಲಾಪದಲ್ಲಿ ಸುಮಾರು 120 ಜನ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರತಿನಿಧಿಗಳನ್ನು ಉದ್ದೇಶಿಸಿ ಜಾತ್ಯಾತೀತತೆ ಬಗ್ಗೆ ಹೆಚ್.ಸಿ. ಕೇಶವಮೂರ್ತಿ ಉಪನ್ಯಾಸ ಮಾಡಿದರು. ಶಾಂತಾರಾಮ ನಾಯಕ್ ರವರು ಎಸ್.ಎಫ್.ಐ. ಸಂವಿಧಾನ ಮತ್ತು ಕಾರ್ಯಕ್ರಮದ ಬಗ್ಗೆ ಉಪನ್ಯಾಸ ನೀಡಿದರು. ನಂತರ ಜಿಲ್ಲಾ ಕಾರ್ಯದರ್ಶಿ ಕಾಂ. ಡಿ. ಪ್ರಕಾಶ್‌ರವರು ಮಂಡಿಸಿದ ವರದಿಯ ಆಧಾರದಲ್ಲಿ ಚರ್ಚಿಸಲಾಯಿತು. ನಂತರ ಕಾಂ. ಡಿ. ಪ್ರಕಾಶ್‌ರವರು ಚರ್ಚೆಯ ಮೇಲೆ ಉತ್ತರಿಸಿದರು. ಆನಂತರ ಸಮ್ಮೇಳನವು 7 ನಿರ್ಣಯಗಳನ್ನು ಅಂಗೀಕರಿಸಿತು. ಪ್ರಮುಖವಾಗಿ ಗ್ರಾಮೀಣ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ಕೊಡಬೇಕು, ವಿದ್ಯಾರ್ಥಿಗಳ ಮೇಲೆ ಹಾಕಿರುವ ಮೊಕದ್ದಮೆಗಳು ವಾಪಸ್ಸಾಗಬೇಕು, ಅಶ್ಲೀಲ ಭಿತ್ತಿಚಿತ್ರ ತಡೆಗೆ ಕ್ರಮ ವಹಿಸಬೇಕು. ಇತ್ಯಾದಿ ಕೊನೆಯಲ್ಲಿ 17 ಸದಸ್ಯರುಗಳ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಡಿ. ಪ್ರಕಾಶ್, ಉಪಾಧ್ಯಕ್ಷರುಗಳಾಗಿ ಎನ್.ಎಸ್. ಶಂಕರೇಗೌಡ, ಪುಷ್ಪಲತಾ. ಎಂ., ಬಿ.ವಿ. ರಾಜು, ಕಾರ್ಯದರ್ಶಿಯಾಗಿ ಟಿ.ಎಲ್. ಕೃಷ್ಣೇಗೌಡ, ಸಹಕಾರ್ಯದರ್ಶಿಗಳಾಗಿ ಪ್ರೇಮ, ಅರುಣ್ ಕುಮಾರ್ ಆಯ್ಕೆಯಾದರು

ತ್ರಿಪುರಾ ಎಸ್.ಎಫ್.ಐ. ಮುಖಂಡರ ಹತ್ಯೆಗೆ ಪ್ರತಿಭಟನೆ

ಬಳ್ಳಾರಿ: ದಕ್ಷಿಣ ತ್ರಿಪುರಾದಲ್ಲಿ ಕೆಲ ಗೂಂಡಾಗಳು ಎಸ್.ಎಫ್.ಐ.ನ ರಾಜ್ಯ ಮುಖಂಡರಾದ ರತನ್‌ದಾಸ್‌ರವರನ್ನು ಫೆಬ್ರುವರಿ 21 ರಂದು ಮಂಗಳವಾರ ಕೊಂದುಹಾಕಿದ್ದನ್ನು ಪ್ರತಿಭಟಿಸಿ ಫೆಬ್ರುವರಿ 23 ರಂದು ಇಡೀ ದಕ್ಷಿಣ ತ್ರಿಪುರಾವೇ ಸಂಪೂರ್ಣ ಬಂದನ್ನು ಆಚರಿಸಿತು. ಇದೇ ರೀತಿಯಾಗಿ ಬಳ್ಳಾರಿ ಜಿಲ್ಲಾ ಎಸ್.ಎಫ್.ಐ. ಸಮಿತಿಯ ಕೊಲೆಯ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಎಸ್.ಎಫ್.ಐ. ಜಿಲ್ಲಾ ಉಪಾಧ್ಯಕ್ಷರಾದ ಕಾಂ. ಕೆ. ಗೋಪಾಲ್ ಕುಷ್ಟಾ ಹಾಗೂ ಹೊಸಪೇಟೆ ತಾಲೂಕಿನ ಎಸ್.ಎಫ್.ಐ. ಮುಖಂಡರಾದ ಕಾಂ. ಎ.ಕೆ. ಉದೇವಪ್ಪ ಜಂಟೀ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಸಮಾಜದ ಕಲ್ಯಾಣ ಇಲಾಖೆ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಶೈಕ್ಷಣಿಕ ವರ್ಷ ಕೊನೆಗೊಳ್ಳುತ್ತಿದ್ದರೂ ಸಹ ನಿಲಯದ ವಿದ್ಯಾರ್ಥಿಗಳಿಗೆ ಸಮ ವಸ್ತ್ರಗಳು ತಲಪಿರುವುದಿಲ್ಲ, ಅಲ್ಲದೆ ವಿದ್ಯಾರ್ಥಿಗಳಿಗೆ ಕೊಡುವ ಸೌಲಭ್ಯಗಳಲ್ಲಿ ಕೆಲವು ಕಡಿತ ಮಾಡಲಾಗಿದೆ. ಈ ನೀತಿಯನ್ನು ಬೇಗನೆ ಕೈಬಿಟ್ಟು ಮೊದಲಿನಂತೆ ಪ್ರಕಾರ ವಿದ್ಯಾರ್ಥಿಗಳಿಗೆ ಬರುವ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ವಿತರಿಸಬೇಕು, ಇಲ್ಲವಾದಲ್ಲಿ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಸ್.ಎಫ್.ಐ. ಹೊಸಪೇಟೆ ತಾಲೂಕು ಸಮಿತಿ ಸಭೆ ಎಚ್ಚರಿಕೆ ನೀಡಿದೆ ಎಂದು ಎಸ್.ಎಫ್.ಐ.ನ ಹೊಸಪೇಟೆ ತಾಲೂಕು ಅಧ್ಯಕ್ಷರಾದ ಕಾಂ. ಕೆ. ಗೋಪಾಲಕೃಷ್ಣ ಹಾಗೂ ನಗರ ಮುಖಂಡರಾದ ಕಾಂ. ಎಂ. ಬ್ರಹ್ಮಾನಂದರೆಡ್ಡಿ ಜಂಟಿ ಹೇಳಿಕೆ ನೀಡಿದ್ದಾರೆ.

ರಶ್ಯದಲ್ಲಿ ಪುನಃ-ರಾಷ್ಟ್ರೀಕರಣದ ಆರಂಭ

ಜಗತ್ ಸಂಚಾರ

-ಶರಶ್ಚಂದ್ರ

ಯೆಲ್ಸ್‌ಸಿನ್ ಹಾಗೂ ಆತನ ಬಾಲಬಡುಕರ ಆಡಳಿತದಲ್ಲಿ ರಶ್ಯ ದಿನೇ ದಿನೇ ಅಧಃ ಪತನಕ್ಕಿಳಿಯುತ್ತಿದೆ. ಈ ಮಧ್ಯದಲ್ಲೂ ಒಂದು ಹೊಸ ಒಳ್ಳೆ ಪ್ರವೃತ್ತಿ ಆರಂಭವಾದಂತಿದೆ. ಅದು ರಶ್ಯದಲ್ಲಿ ಇತ್ತೀಚೆಗೆ ಕಾಣುತ್ತಿರುವ ಪುನಃ ರಾಷ್ಟ್ರೀಕರಣದ್ದು. ಯೆಲ್ಟ್ ಸಿನ್ ನ ಬಂಟ ಲುಝುಕೋವ್ ಮೇಯರ್ ಆಗಿರುವ ಮಾಸ್ಕೋ ನಗರಸಭೆ, ನಗರ ಪ್ರದೇಶದಲ್ಲಿದ್ದ ಸಾರ್ವಜನಿಕ ಕ್ಷೇತ್ರದಲ್ಲಿದ್ದು ಖಾಸಗೀಕರಿಸಿದ್ದ ಕೈಗಾರಿಕೆಗಳನ್ನು ಪುನಃ ರಾಷ್ಟ್ರೀಕರಿಸಲು ನಿರ್ಧರಿಸಿದೆ. ಮೇಯರ್ ಲುಝುಕೋವರೇ ಮಂಡಿಸಿದ ಈ ನಿರ್ಣಯವನ್ನು ನಗರಸಭೆ ಅಂಗೀಕರಿಸಿತು. ಯೆಲ್ಟ್‌ಸಿನ್ ಮಾಸ್ಕೋ ಮೇಯರ್ ಆಗಿದ್ದಾಗ ಆರಂಭಿಸಿದ್ದ ಸಾರ್ವಜನಿಕ ಕ್ಷೇತ್ರದ ಘಟಕಗಳ ಖಾಸಗೀಕರಣ ಅತಿದೊಡ್ಡ ಪ್ರಮಾದ ಎಂಬ ಅರಿವು ನಗರಸಭಾ ಸದಸ್ಯರಿಗೆ ಆಗಿದ್ದು, ಪುನಃ ರಾಷ್ಟ್ರೀಕರಣಕ್ಕೆ ಭಾರಿ ಬೆಂಬಲ ದೊರಕುತ್ತಿದೆ. ಖಾಸಗೀಕರಿಸಿದ ಈ ಕೈಗಾರಿಕೆಗಳಲ್ಲಿ ಸರ್ಕಾರ ಶೇಕಡಾ 51 ಬಂಡವಾಳ ಹೊಂದುವ ಮೂಲಕ ಅದನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ನಿರ್ಣಯದ ಸಾರಾಂಶ.

ಖಾಸಗೀಕರಣ ಯಾವುದೇ ಅರ್ಥದಲ್ಲಿ ರಶ್ಯಕ್ಕೆ ಒಳ್ಳೆದು ಮಾಡಿಲ್ಲ ಎಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿ ಮನದಟ್ಟಾಗಿದೆ. ಕೈಗಾರಿಕಾ ಸಾಮರ್ಥ್ಯ ಕುಸಿಯುತ್ತಿದೆ. ಹಲವಾರು ಕಾರ್ಖಾನೆಗಳು ಮುಚ್ಚುತ್ತಿವೆ. ಇವೆಲ್ಲಾ ಕಾರಣಗಳಿಂದ ಹೆಚ್ಚು ಹೆಚ್ಚು ಜನ ವಿಭಾಗಗಳು, ಪುನಃ ರಾಷ್ಟ್ರೀಕರಣಕ್ಕೆ ಒತ್ತಾಯ ತರುತ್ತಿದ್ದಾರೆ. ಉದಾಹರಣೆಗೆ ರಕ್ಷಣಾ ಇಲಾಖೆ ತನ್ನ ನಿಯಂತ್ರಣದಲ್ಲಿದ್ದ ಖಾಸಗೀಕರಿಸಲ್ಪಟ್ಟ ಕೈಗಾರಿಕೆಗಳ ಪುನಃ ರಾಷ್ಟ್ರೀಕರಣಕ್ಕೆ ಒತ್ತಾಯಿಸುತ್ತಿದೆ. ಏಕೆಂದರೆ ಈ ಕೈಗಾರಿಕೆಗಳು ರಕ್ಷಣಾ ಖಾತೆಯ ಯೋಜನೆಗಳ ಭಾಗವಾಗಿದ್ದವು.

ಇನ್ನೊಂದು ಉದಾಹರಣೆ ಖಾಸಗೀಕರಣ ಹೇಗೆ ರಶ್ಯನ್ ಕೈಗಾರಿಕೆ ದಿವಾಳಿ ಎಬ್ಬಿಸುವ ನೀತಿ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡುವಂತಹುದಾಗಿದೆ. ಝಿಲ್ ಎಂಬ ಕಾರು ಉತ್ಪಾದಿಸುವ ಕಾರ್ಖಾನೆ ಚೆನ್ನಾಗಿ ನಡೆಯುತ್ತಿತ್ತು. ಖಾಸಗೀಕರಿಸಿದ ಮೇಲೆ ಎರಡು ವಾರ ಅದು ಉತ್ಪಾದನೆ ನಿಲ್ಲಿಸಬೇಕಾಯಿತು. ಝಿಲ್ ಮ್ಯಾನೇಜ್‌ಮೆಂಟ್ ರಾಷ್ಟ್ರೀಕರಣಕ್ಕೆ ಒತ್ತಾಯಿಸುತ್ತಿದೆ.

ರಶ್ಯದಲ್ಲಿ ಇತ್ತೀಚೆಗೆ ನಡೆದ ಇನ್ನೆರೆಡು ಘಟನೆಗಳು ಗಾಳಿ ಎತ್ತ ಬೀಸುತ್ತಿದೆ ಎಂದು ಸ್ಪಷ್ಟಪಡಿಸುತ್ತದೆ. ರಶ್ಯದ ಪ್ರಬಲ ಕಲ್ಲಿದ್ದಲು ಗಣಿ ಕಾರ್ಮಿಕರು ಹಲವಾರು ತಿಂಗಳುಗಳ ಕಾಲ ತಮ್ಮ ಪಾವತಿ ಮಾಡದಿರುವ ಸಂಬಳ (300 ಶತ ಕೋಟಿ ರೂಬಲ್‌ಗಳಷ್ಟು) ತತ್ ಕ್ಷಣ ಕೊಡದಿದ್ದರೆ ಅನಿರ್ದಿಷ್ಟ ಮುಷ್ಕರದ ಬೆದರಿಕೆ ಹಾಕಿದ್ದಾರೆ. ೮೦ ಕಲ್ಲಿದ್ದಲು ಗಣಿಗಳನ್ನು ಮುಚ್ಚುವುದನ್ನು ಅವರು ವಿರೋಧಿಸಿದ್ದಾರೆ.

ಕಾರ್ಮಿಕರ ಬೆಳೆಯುತ್ತಿರುವ ಪ್ರತಿಭಟನೆಯನ್ನು ಗಮನದಲ್ಲಿಟ್ಟುಕೊಂಡು ರಶ್ಯನ್ ಪಾರ್ಲಿಮೆಂಟು ಕನಿಷ್ಠ ವೇತನವನ್ನು 20,500 ರೂಬಲ್ ಗಳಿಂದ 54,000 ರೂಬಲ್‌ಗಳಿಗೆ ಏರಿಸಿದೆ. ಹೆಚ್ಚು ಕಡಿಮೆ ಮೂರು ಪಟ್ಟು.

ಈ ಮೂರು ಘಟನೆಗಳು ಅಧ್ಯಕ್ಷ ಯೆಲ್ಟ್‌ಸಿನ್‌ಗೆ ನುಂಗಲಾರದ ತುತ್ತಾಗಿದೆ. ಮಾಸ್ಕೋ ನಗರ ಸಭೆಯ ಹಾಗೂ ಪಾರ್ಲಿಮೆಂಟಿನ ಕನಿಷ್ಠ ವೇತನ ಏರಿಕೆಯ ನಿರ್ಧಾರಗಳನ್ನು ಬೆಂಬಲಿಸಿದರೂ, ವಿರೋಧಿಸಿದರೂ ಆತ ಇಕ್ಕಟ್ಟಿಗೆ ಸಿಕ್ಕಿಬೀಳುವುದು ಖಚಿತ. ಕಲ್ಲಿದ್ದಲು ಕಾರ್ಮಿಕರ ಬೆದರಿಕೆ ಸಹ ತೀವ್ರ ರಾಜಕೀಯ ಸವಾಲು. ರಶ್ಯನ್ ರಾಜಕೀಯದಲ್ಲಿ ಗಣಿಕಾರ್ಮಿಕರ ಪಾತ್ರ ಯಾವಾಗಲೂ ಹಿರಿಯ.

ಸೋಮಾಲಿಯಾದಿಂದ ಜಾಗ ಖಾಲಿ ಮಾಡಿದ ಅಮೇರಿಕನ್ ಸೈನಿಕರು

ಸೋಮಾಲಿಯಾ "ಅರಾಜಕತೆ, ಅಶಾಂತಿಯನ್ನು ನಿವಾರಿಸಿ ಅಲ್ಲಿನ ಜನತೆಗೆ 'ಮಾನವೀಯ ಸಹಾಯ' ಮಾಡಲು ಅಲ್ಲಿ ಹೋಗಿದ್ದ ಅಮೇರಿಕನ್ ಸೈನಿಕರು ಅತ್ಯಂತ ಅವಮಾನಕಾರಿ ರೀತಿಯಲ್ಲಿ ಅಲ್ಲಿಂದ ಜಾಗ ಖಾಲಿ ಮಾಡಬೇಕಾಗಿ ಬಂದಿದೆ. ಸೋಮಾಲಿಯಾದ ಈ 'ಶಾಂತಿ-ಭಂಗದ ಪ್ರಕರಣ' ಅಮೆರಿಕನ್ ಸಾಮ್ರಾಜ್ಯಶಾಹಿ ಆಕ್ರಮಿಕ ಉದ್ಧಟತನದ ಮಿತಿಗಳನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಕೊನೆಯ ಹಂತದಲ್ಲಿ ವಿಶ್ವಸಂಸ್ಥೆ 'ಶಾಂತಿ ಪಾಲನಾ' ಪಡೆಯಾಗಿ ಕೆಲಸ ಮಾಡಿದ 2400 ಬಾಂಗ್ಲಾದೇಶ್, ಪಾಕಿಸ್ತಾನದ ಸೈನಿಕರು ಸೋಮಾಲಿಯಾದಿಂದ ಹಿಂದಿರುವಾಗ ಅವರ ರಕ್ಷಣೆಗೆ ಅಮೇರಿಕನ್ ಹಾಗೂ ಇಟಾಲಿಯನ್ ಮರೀನ್ ಸೈನಿಕರನ್ನು ಒಳಗೊಂಡ ಯುದ್ಧ ಹಡಗುಗಳಿಂದ ರಕ್ಷಣೆ ಕೊಡಬೇಕಾಗಿಯಿತು.

ವಿಶ್ವಸಂಸ್ಥೆ ಪಡೆಗಳು ಸೋಮಾಲಿಯಾ ಬಿಡುತ್ತಿದ್ದಂತೆ ರಾಜಧಾನಿ ಮೊಗಾದಿಶು ವಿಮಾನ ನಿಲ್ದಾಣದಲ್ಲಿ ಗುಂಡೇಟುಗಳು ಕೇಳಿ ಬಂದವು. ವಿಶ್ವಸಂಸ್ಥೆಯ ಪಡೆಗಳ ವಿಮಾನವೊಂದು ಗುಂಡೇಟಿನಲ್ಲಿ ಸಿಕಿ ಬಿದ್ದು ದೂರ ಸರಿಯಬೇಕಾಯಿತು.

ಅಮೇರಿಕದ ತೊತ್ತಿನಂತೆ ವರ್ತಿಸುತ್ತಿರುವ ವಿಶ್ವಸಂಸ್ಥೆ 'ಶಾಂತಿ ಪಾಲನ ಪಡೆ'ಯ ವೈಫಲ್ಯಕ್ಕೆ ಸೋಮಾಲಿಯಾ ಒಳ್ಳೆಯ ಉದಾಹರಣೆ. ಅಲ್ಲಿ ಶಾಂತಿ ಪಾಲಿಸುವ ಬದಲು, ರಾಜಕೀಯ ಪರಿಹಾರಕ್ಕೆ ನೆರವಾಗುವ ಬದಲು ಅಲ್ಲಿ ರಾಜಕೀಯವಾಗಿ ಪಕ್ಷ ಹಿಡಿದು, ಕಾನೂನು ವ್ಯವಸ್ಥೆಯನ್ನು ಇನ್ನಷ್ಟು ಹದಗೆಡಿಸಿದ್ದು ಅಲ್ಲಿ ವಿಶ್ವಸಂಸ್ಥೆಯ ಸಾಧನೆ.

ಕರಾಚಿಯಲ್ಲಿ ಇಬ್ಬರು ಅಮೇರಿಕನ್ ರಾಯಭಾರ ಸಿಬ್ಬಂದಿ ಕೊಲೆ

ಕರಾಚಿಯಲ್ಲಿ ಅಮೇರಿಕನ್ ರಾಯಭಾರ ಕಛೇರಿಯ ಸಿಬ್ಬಂದಿ ಇಬ್ಬರನ್ನು, ಕಚೇರಿಗೆ ವ್ಯಾನ್ ನಲ್ಲಿ ತೆರಳುತ್ತಿದ್ದಾಗ ಅನಾಮಧೇಯ ಗನ್ ಧಾರಿಗಳು ದಾರಿಯಲ್ಲಿ ಕೊಲೆ ಮಾಡಿದ್ದಾರೆ. ಇನ್ನೊಬ್ಬರಿಗೆ ತೀವ್ರ ಗಾಯಗಳಾಗಿವೆ. ಹಂತಕರು ಕದ್ದ ಟ್ಯಾಕ್ಸಿಯೊಂದರಲ್ಲಿ ಗುಂಡು ಹಾರಿಸಿ ಪರಾರಿಯಾದರು ಎನ್ನಲಾಗಿದೆ.

ಈ ಘಟನೆಯಿಂದ ಅಮೇರಿಕ ಹಾಗೂ ಪಾಕಿಸ್ತಾನ ಸರಕಾರಗಳು ಗಾಬರಿಯಾಗಿವೆ. ಈ ಘಟನೆಯ ನಂತರ ಕರಾಚಿಯ ರಾಯಭಾರ ಕಛೇರಿ ಮುಚ್ಚಲಾಗಿದ್ದು, ಭಾರಿ ಸಶಸ್ತ್ರ ಪೋಲೀಸ್ ಪಹರೆ ನೀಡಲಾಗಿದೆ. ಕರಾಚಿಯಲ್ಲಿ ಕಳೆದ ಒಂದು ವರ್ಷದಿಂದ ತೀವ್ರ ಹಿಂಸಾಚಾರ ನಡೆಯುತ್ತಿದ್ದರೂ ಅಮೇರಿಕನ್ನರನ್ನು ಕೊಲೆ ಮಾಡಿರುವುದು ಇದೇ ಮೊದಲು. ಕೊಲೆಯಾದವರಲ್ಲಿ ಒಬ್ಬ ರಾಯಭಾರ ಕಚೇರಿ ಸಿಬ್ಬಂದಿಯ ಮರೆಯಲ್ಲಿ ಕೆಲಸ ಮಾಡುವ ಸಿಐಎ ಏಜೆಂಟ್ ಎನ್ನಲಾಗಿದೆ.

ಅಪಹರಿಸಲಾದ ಟ್ಯಾಕ್ಸಿ ಡ್ರೈವರ್ ಕೊಟ್ಟಿರುವ ಮಾಹಿತಿ ಆಧಾರದ ಮೇಲೆ ತನಿಖೆ ಆರಂಭವಾಗಿದೆ. ಅಮೇರಿಕದ ಎಫ್.ಬಿ.ಐ. ಸಿಬ್ಬಂದಿ ಕರಾಚಿಯಲ್ಲಿ ಆಗಲೇ ಬಂದಿಳಿದಿದ್ದು ತನಿಖೆ ಆರಂಭಿಸಿದ್ದಾರೆ. ವಿದೇಶೀ ಎಫ್.ಬಿ.ಐ. ತನಿಖೆಗೆ ಅವಕಾಶ ಮಾಡಿದ್ದಕ್ಕೆ ಕರಾಚಿಯಲ್ಲಿ ಹಲವೆಡೆ ಪ್ರತಿಭಟನೆ ವ್ಯಕ್ತಪಟ್ಟಿವೆ.

ಹಂತಕರು ಎಂ.ಕ್ಯು.ಎಂ. ಅಥವಾ ಇಸ್ಲಾಮಿಕ್ ಮೂಲಭೂತವಾದಿ ಗುಂಪಿಗೆ ಸೇರಿರಬೇಕು ಎಂದು ಶಂಕಿಸಲಾಗಿದೆ. ಸಿಂಧ್ ಸರ್ಕಾರ ಭಾರತದ ಬೇಹುಗಾರಿಕೆ ಸಂಸ್ಥೆಗಳ ಕೃತ್ಯ ಇದು ಎಂದು ಆಪಾದಿಸಿದೆ. ಪಾಕಿಸ್ತಾನ ಸರ್ಕಾರ ಇದು ಭಾರತದ ಏಜೆಂಟ್ ಗಳ, ಅಥವಾ ಕರಾಚಿಯ ಮಾದಕದ್ರವ್ಯಗಳ ಮಾಫಿಯಾದ ಕೃತ್ಯ ಎಂದಿದೆ.

1993 ರಲ್ಲಿ ನ್ಯೂಯಾರ್ಕ್ ನ ಬಾಂಬ್ ಕೇಸ್ ನಲ್ಲಿ ಆಪಾದಿತನಾಗಿದ್ದ ಪಾಕಿಸ್ತಾನಿ ರಾಮಜೀ ಅಹ್ಮದ್ ಯೂಸಫ್ ನ ಬಂಧನ ಹಾಗೂ ಅಮೇರಿಕಕ್ಕೆ ಒಯ್ದು ಆತನ ವಿಚಾರಣೆಗೆ ಇದು ಪ್ರತೀಕಾರ ಕ್ರಮ ಇರಬೇಕು ಎಂದು ಅಮೇರಿಕನ್ ಸರ್ಕಾರದ ಗುಮಾನಿ.

ಮಾರ್ಚ್ 6 ರಂದು ಸ್ಟಾಲಿನ್‌ರವರ 42 ನೇ ಮರಣ ವಾರ್ಷಿಕದಂದು ಮಾಸ್ಕೋದಲ್ಲಿ ಕಮ್ಯುನಿಸ್ಟ್-ಪರ ಮತಪ್ರದರ್ಶನದ ಒಂದು ದೃಶ್ಯ



ದೆಂಗ್ ಆರೋಗ್ಯದ ಬಗ್ಗೆ 'ಮೊಸಳೆ ಕಣ್ಣೀರು'.

ಸಾಮ್ರಾಜ್ಯಶಾಹಿ ಮಾಧ್ಯಮಗಳಲ್ಲಿ ದೆಂಗ್ ಆರೋಗ್ಯ ಹದಗೆಡುತ್ತಿರುವ ಬಗ್ಗೆ ಹಾಗೂ ಸಮಾಜವಾದಿ ಚೀನಾದ ಭವಿಷ್ಯದ ಬಗೆಗೂ 'ಹುಸಿ ಆತಂಕ' ತೋರಿಸುವ ವರದಿಗಳು, ಬುರುಡೆಗಳು, ಪುಕಾರುಗಳು ಪುಂಖಾನುಪುಂಖವಾಗಿ ಬರುತ್ತಿವೆ. ಇದು ಸಾಮ್ರಾಜ್ಯಶಾಹಿ ಹಳೆ ತಂತ್ರ. ಮಾವೋ ನಿಧನದ ಸಮಯದಲ್ಲೂ, ಚೀನಾ ಒಡೆದು ಚೂರಾಗಿ ಸಮಾಜವಾದ ನಾಶವಾಗುತ್ತದೆ ಎಂಬ ಪುಕಾರು ಹಬ್ಬಿಸಿದರು. ಮಾವೋರನ್ನಂತೂ ಸಾಯುವ ಮೊದಲೇ ಮೂರು ಬಾರಿ 'ಸುಳ್ಳು ಸುದ್ದಿ'ಗಳಲ್ಲಿ ಸಾಯಿಸಿದ್ದರು. ಇಂತಹ ಪುಕಾರುಗಳ ಮೂಲಕ ಚೀನಾ ಹಾಗೂ ಜಗತ್ತಿನ ದುಡಿಯುವ ಜನರಲ್ಲಿ ಸಮಾಜವಾದದ ಭವಿಷ್ಯದ ಬಗ್ಗೆ ಅನುಮಾನ, ಆತಂಕ ಹುಟ್ಟಿಸುವುದು ಅವರ ಉದ್ದೇಶ. ಆದರೆ ಅದನ್ನು ಸಾಧಿಸಲು ಅವರಿಗೆ ಸಾಧ್ಯವಾಗುವುದಿಲ್ಲ.

ದೆಂಗ್ ನಿಧನದ ಬಳಿಕ ಪಕ್ಷ ಹಾಗೂ ಸರ್ಕಾರದ ನಾಯಕತ್ವಕ್ಕೆ ಹೋರಾಟ ನಡೆಯುತ್ತದೆ. ಆ ಹೋರಾಟ ಚೀನಾವನ್ನು ಹಾಗೂ ಸಮಾಜವಾದವನ್ನು ನಾಶಮಾಡುತ್ತದೆ ಎಂಬುದು ಅವರ ಪುಕಾರು.

ದೆಂಗ್ 90 ವರ್ಷದವರಾಗಿದ್ದು ಸ್ವಾಭಾವಿಕವಾಗಿಯೇ ಅವರ ಆರೋಗ್ಯ ಹದಗೆಡುತ್ತಿದೆ. ಅವರು ಬಹಳ ವರ್ಷ ಬದುಕಲಿಕ್ಕಿಲ್ಲ, ಆದರೆ ಚೀನಿ ಕಮ್ಯುನಿಸ್ಟ್ ಹಾಗೂ ಸರ್ಕಾರಗಳಲ್ಲಿ ಆಗಲೇ ಯುವ ನಾಯಕತ್ವದ ಚುಕ್ಕಾಣಿ ಹಿಡಿದಿದೆ. 50-60 ವಯಸ್ಸಿನ ಹೊಸ ನಾಯಕತ್ವವನ್ನು ತರಬೇತಿಗೊಳಿಸಿ ಅವರ ಕೈಗೆ ನಾಯಕತ್ವ ವಹಿಸಿಕೊಡುವಲ್ಲಿ ದೆಂಗ್‌ರೇ ಸ್ವತಃ ನಾಯಕತ್ವದ ಪಾತ್ರ ವಹಿಸಿದ್ದರು. 1979ರಷ್ಟು ಹಿಂದೆ ಪಕ್ಷದ ಕೇಂದ್ರ ಸಮಿತಿಯ ಗಮನ ಸೆಳೆದು, ಆ ಬಗ್ಗೆ ಹಲವಾರು ಪ್ರಾಯೋಗಿಕ ಕ್ರಮಗಳನ್ನು ಕೈಗೊಂಡಿದ್ದರು. ಸ್ವತಃ ಕೆಲವು ವರ್ಷಗಳು ಹಿಂದೆ ಎಲ್ಲಾ ದೈನಂದಿನ ಜವಾಬ್ದಾರಿಯಿಂದ ನಿವೃತ್ತರಾಗಿದ್ದು, ಸಲಹೆ-ಸೂಚನೆಗಳನ್ನು ಮಾತ್ರ ನೀಡುತ್ತಿದ್ದರು. ನಾಯಕತ್ವದ ಆಯ್ಕೆಯಲ್ಲಿ ಹಿರಿತನದ ಬದಲು ಅನುಭವಿ, ತರಬೇತಿ ಹೊಂದಿದ ಯುವಕರನ್ನು ತರುವುದನ್ನು ಪಕ್ಷದ ಸಂಘಟನೆಯ ನೀತಿಯಾಗಿ ಜಾರಿಗೆ ತರುವಲ್ಲಿ ದೆಂಗ್ ಪಾತ್ರ ಹಿರಿದು.

ಮಾವೋ ನಂತರ ಚೀನಾದ ಸಾಮ್ರಾಜ್ಯಶಾಹಿ-ವಿರೋಧಿ ನೀತಿಯನ್ನು ಹೊಸ ಸನ್ನಿವೇಶಗಳಲ್ಲಿ ಮುಂದುವರೆಸಿ, ಅದನ್ನು ಒಂದು ಬಲಾಢ್ಯ ಸಮಾಜವಾದಿ ದೇಶ ಮಾಡಲು ಬೇಕಾದ ಆ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ದೆಂಗ್ ರ ಸೈದ್ಧಾಂತಿಕ, ಸಂಘಟನಾ ಶಕ್ತಿ ದೊಡ್ಡ ಪಾತ್ರ ವಹಿಸಿದೆ. ಈ ಪಾತ್ರಕ್ಕೆ ಹೊಸ ನಾಯಕತ್ವ ತಯಾರಾಗಿದ್ದು, ಅವರು ದೆಂಗ್ ರ ನೀತಿಗಳನ್ನು ಮುಂದುವರೆಸಿ ಬೆಳೆಸಿ ಸಾಮ್ರಾಜ್ಯಶಾಹಿಗಳ 'ಪುಕಾರು' 'ವದಂತಿ'ಗಳನ್ನು ಸುಳ್ಳು ಎಂದು ಸಾಬೀತು ಗೊಳಿಸಲಿದ್ದಾರೆ.

ಬೇರಿಂಗ್ ಎಂಬ ಬ್ರಿಟಿಷ್ ಹಣಕಾಸು ಕಂಪನಿ ದೀವಾಳಿ

ಹಣಕಾಸಿನ ಸಟ್ಟಾ ವ್ಯಾಪರದ ಫಲ

ಬೇರಿಂಗ್ ಬ್ರದರ್ಸ್ ಅಂಡ್ ಕಂಪನಿ ಎಂಬ ಬ್ರಿಟಿಷ್ ಹಣಕಾಸು ಕಂಪನಿ, ಅದರ ಸಿಂಗಾಪೂರ್ ಶಾಖೆಯ ಅಧಿಕಾರಿ ನಿಕ್ ಲೀಸನ್ ಎಂಬುವನ ಹಣಕಾಸಿನ ಸಟ್ಟಾ ವ್ಯಾಪಾರಗಳಿಂದ ನಷ್ಟ ಅನುಭವಿಸಿ ದೀವಾಳಿ ಏಳು ಹಂತಕ್ಕೆ ಬಂದಿದೆ. ಬೇರಿಂಗ್ಸ್ 232 ವರ್ಷ ಹಳೆಯದಾದ ಹೆಸರಾಂತ ಹಣಕಾಸಿನ ಕಂಪನಿಯಾಗಿತ್ತು.

ಈ ಸುದ್ದಿ ಬಂಡವಾಳಶಾಹಿ ವಲಯಗಳಲ್ಲಿ ಭಾರಿ ಗಾಬರಿ ಉಂಟು ಮಾಡಿದೆ. ಬೇರಿಂಗ್ಸ್ ಹಾಗೂ ಇತರ ಹಲವಾರು ಹಣಕಾಸಿನ ಕಂಪನಿಗಳು ಲೆಕ್ಕ ಪರಿಶೋಧಕರು, ಸಂಸ್ಥೆಯ ಇತರ ಕಟ್ಟುಪಾಡುಗಳಿದ್ದಾಗ್ಯೂ ಇಂತಹ ಭಾರಿ ನಷ್ಟ ಹೇಗೆ ಸಂಭವಿಸಿತು ಎಂದು ತಲೆಕೆರೆದುಕೊಂಡು ತನಿಖೆ ನಡೆಸುತ್ತಿದ್ದಾರೆ.

ಈಗ ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳ ಹಣಗಳ (ಡಾಲರ್, ಮಾರ್ಕ್, ಯೆನ್, ಪೌಂಡ್ ಇತ್ಯಾದಿ) ಬೆಲೆ ಮಾರುಕಟ್ಟೆಯ ಆಧಾರದಲ್ಲಿ ಏರುಪೇರಾಗುತ್ತಿದ್ದು, ಈ ಕರೆನ್ಸಿಯ ಸಟ್ಟಾ ವ್ಯಾಪಾರ ಭಾರಿ ಲಾಭದಾಯಕ ಉದ್ಯಮವಾಗಿದೆ. ಇದು ಭಾರಿ ಇಂತಹ ಭೀಕರ ದುರಂತಕ್ಕೂ ಕೆಲವು ಕಂಪನಿಗಳನ್ನು ತಳ್ಳಬಹುದು ಎಂದು ಗೊತ್ತಾಗಿದ್ದು ಈಗಲೇ.

ಬೇರಿಂಗ್ಸ್ ಹಗರಣ ಬಂಡವಾಳಶಾಹಿ ವ್ಯವಸ್ಥೆಯ ಅರಾಜಕತೆಯ ಒಂದು ಜೀವಂತ ದೃಷ್ಟಾಂತ

ಮಾಸ್ಕೋದ ಜನಪ್ರಿಯ ಟಿವಿ ಪತ್ರಕರ್ತನ ಕೊಲೆ

ಮಾಸ್ಕೋದ ಜನಪ್ರಿಯ ಟಿವಿ ಪತ್ರಕರ್ತ 38 ವರ್ಷದ ವ್ಲಾಡಿಸ್ಲಾವ್ ಲಿಸ್ಟಿಯೆವ್‌ರನ್ನು ಆತನ ಅಪಾರ್ಟ್ ಮೆಂಟ್ ನಲ್ಲೇ ಗುಂಡಿಟ್ಟು ಕೊಲ್ಲಲಾಯಿತು. ಮಾಸ್ಕೋದ ಟಿವಿ ಕಂಪನಿಯನ್ನು ಸಾರ್ವಜನಿಕ ಸಂಸ್ಥೆಯಾಗಿ ಪರಿವರ್ತಿಸಲು ನೇಮಿಸಲಾಗಿದ್ದ ಲಿಸ್ಟಿಯೆವ್ ಜನಪ್ರಿಯ ಕಾರ್ಯಕ್ರಮವೊಂದರ ಪ್ರಸ್ತುತಕಾರನಾಗಿದ್ದ. ಈ ಕೊಲೆ ಮಾಸ್ಕೋದ ಭೂಗತ ಮಾಫಿಯಾ ಮಾಡಿಸಿದ್ದು ಎನ್ನಲಾಗಿದೆ. ಹತ್ತಾರು ಸಾವಿರ ಜನ ಅವರ ಶವಯಾತ್ರೆಯಲ್ಲಿ ಭಾಗವಹಿಸಿದ್ದು ಇದು ಯೆಲ್ಸಿನ್ ಸರ್ಕಾರಕ್ಕೆ ಭಾರೀ ನಾಚಿಕೆಗೇಡಿ ಘಟನೆಯಾಗಿತ್ತು. ಮಾಸ್ಕೋದ ಭೀಕರವಾದ ಹೆಚ್ಚುತ್ತಿರುವ ಅಪರಾಧಗಳ ಬಗ್ಗೆ ಜನತೆಯ ತೀವ್ರ ಪ್ರತಿಭಟನೆ ಇದರಲ್ಲಿ ವ್ಯಕ್ತವಾಗಿದೆ. ಪರಿಸ್ಥಿತಿಯ ಗಂಭೀರತೆ ಕಂಡು ಅಧ್ಯಕ್ಷ ಯೆಲ್ಟ್‌ಸಿನ್ ಮಾಸ್ಕೋದ ಪೋಲೀಸ್ ಮುಖ್ಯಸ್ಥ ಹಾಗೂ ಚೀಫ್ ಪ್ರಾಸಿಕ್ಯೂಟರನ್ನು ವಜಾ ಮಾಡುವ ಆಜ್ಞೆ ಹೊರಡಿಸಿದರೆ, ಮಾಸ್ಕೋದ ಮೇಯರ್ ಅದನ್ನು ಉಲ್ಲಂಘಿಸಿ, ಆಜ್ಞೆಯ ಜಾರಿಯನ್ನು ತಡೆಹಿಡಿದಿದ್ದಾರೆ. ಈ ದುರಂತವನ್ನು ತಮ್ಮ ರಾಜಕೀಯ ಬಳಸುವದನ್ನು ನೋಡಿ ಜನರು ಇನ್ನಷ್ಟು ರೋಸಿ ಹೋಗಿದ್ದಾರೆ. ಅಧ್ಯಕ್ಷ ಯೆಲ್ಸಿನ್ ಹಾಗೂ ಮೇಯರ್ ಲುಝುಕೋವ್ ಇಬ್ಬರೂ ಅಪರಾಧವನ್ನು ನಿಯಂತ್ರಿಸುವುದರಲ್ಲಿ ವಿಫಲವಾಗಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಸಿಪಿಐ(ಎಂ) 15

15 ನೇ ಮಹಾಧಿವೇಶನ, ಚಂಡೀಗಢ 3-8 ಏಪ್ರಿಲ್, 1995

ಪಂಜಾಬಿನಲ್ಲೊಂದು ಆಂದೋಲನದ ರೂಪ ಪಡೆಯುತ್ತಿರುವ ಹದಿನೈದನೇ ಮಹಾಧಿವೇಶನದ ಸಿದ್ಧತೆ

ಏಪ್ರಿಲ್ 3, 1995 -ಸಿಪಿಐ(ಎಂ)ನ 15ನೇ ಮಹಾಧಿವೇಶನದ ಸಮೀಪಿಸುತ್ತಿರುವಂತೆ ಚಂಡೀಗಢದಲ್ಲಿ ಸಿದ್ಧತೆ ಇನ್ನಷ್ಟು ಭರದಿಂದ ಸಾಗಿದೆ. ವಿಶೇಷತೆಯೆಂದರೆ ಸಿದ್ಧತೆಯ ಉತ್ಸಾಹ ಚಂಡೀಗಡದಲ್ಲಷ್ಟೇ ಅಲ್ಲ ಇಡೀ ಪಂಜಾಬಿನಲ್ಲಿ ಕಾಣುತ್ತಿದೆ. ಅದೂ ಒಂದು ಆಂದೋಲನದ ರೂಪ ಪಡೆಯುತ್ತಿದೆ. ಜನ ಕಾಂಗ್ರೆಸ್‌ನಿಂದಲೂ ದೂರ ಸರಿಯುತ್ತಿದ್ದಾರೆ, ಮೂಲಭೂತವಾದಿ ಕೋಮುವಾದಿ ಶಕ್ತಿಗಳಿಂದಲೂ ಬೇಸತ್ತಿದ್ದಾರೆ ಎಂಬುದು ಮಹಾಧಿವೇಶನದ ಸಿದ್ಧತೆಗೆ ಜನರ ಸ್ಪಂದನ ನೋಡಿದರೆ ಸ್ಪಷ್ಟವಾಗುತ್ತದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಗತ್‌ರಾಂ ಪಾಸ್ಲಾ ರವರ ನೇತೃತ್ವದಲ್ಲಿ 135 ಸದಸ್ಯರುಳ್ಳ ಸ್ವಾಗತ ಸಮಿತಿ ರಚನೆಗೊಂಡಿದ್ದು ಸ್ವಾತಂತ್ರ್ಯ ಹೋರಾಟಗಾರ ಬಾಬಾ ಭಗತ್ ಸಿಂಗ್ ಬಿಲ್ಗಾ, ಪಾಲ್ ಸಿಂಗ್ ಧಿಲ್ಲೋಲ, ಪ್ರಸಿದ್ಧ ಪಂಜಾಬಿ ನಾಟಕಕಾರ ಗುರುಶರಣ್‌ಸಿಂಗ್, ಪಂಜಾಬಿ ವಿಶ್ವ ವಿದ್ಯಾಲಯದ ಸೆನೇಟ್ ಸದಸ್ಯ ಪ್ರೊ. ಎಸ್. ಪಿ. ಆನಂದ್, ಪಂಜಾಬ್ ವಿ.ವಿ ಹಾಗೂ ಕಾಲೇಜ್ ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ. ದಿಲ್‌ಬಾಗ್ ಸಿಂಗ್, ಕವಿ ಹರ್ಬಜನ್ ಸಿಂಗ್ ಹುಂದಲ್ ಮುಂತಾದ ಗಣ್ಯರು ಅದರಲ್ಲಿದ್ದಾರೆ.

ಇನ್ನೊಂದು ವಿಶೇಷ ಅಂಶವೆಂದರೆ ಈ ಮಹಾಧಿವೇಶನದಲ್ಲಿ ಭಾಗವಹಿಸುವ ಸುಮಾರು 750 ಪ್ರತಿನಿಧಿಗಳಿಗೆ ಊಟೋಪಚಾರಕ್ಕಾಗಿರುವ ವ್ಯವಸ್ಥೆ. ಎರಡು ದಿನ ಅಮೃತಸರ ನಗರವಾಸಿಗಳು ಊಟೋಪಚಾರ ಏರ್ಪಡಿಸುತ್ತಾರೆ. ಥೀನ್ ಅಣೆಕಟ್ಟು ಕಾರ್ಮಿಕರು ಒಂದು ದಿನದ ಊಟದ ವ್ಯವಸ್ಥೆ ಮಾಡಲು ನಿರ್ಧರಿಸಿದ್ದಾರೆ. ಭಾಟಿಂಡಾ ಜಿಲ್ಲೆಯ ಸಂಗಾತಿಗಳು ೫ ತುಪ್ಪದ ಪೀಪಾಯಿಗಳನ್ನು ಕೊಡಗೆ ನೀಡಿದ್ದಾರೆ. ಲುಧಿಯಾನಾ ಜಿಲ್ಲೆಯ ಸಂಗಾತಿಗಳು ಮೂರು ದಿನ ಹಾಲು ಪೂರೈಸುತ್ತಾರೆ, ಜಾಲಂಧರ್ ಜಿಲ್ಲೆಯವರು ಎರಡು ದಿನ, ಸಂಗ್ರೂರ್ ಜಿಲ್ಲೆ ಹಾಗೂ ಪಾಟಿಯಾಲಾ ಜಿಲ್ಲೆಯವರು ಒಂದೊಂದು ದಿನ ಹಾಲು ಪೂರೈಸುವುದಾಗಿ ಹೇಳಿದ್ದಾರೆ. ರೋಪಾರ್ ಜಿಲ್ಲೆಯವರಂತೂ ಆರೂ ದಿನ ಹಾಲು ಪೂರೈಸುವ ಏರ್ಪಾಡು ಮಾಡುತ್ತಿದ್ದಾರೆ. ಹೋಶಿಯಾರ್ ಪುರ್ ಜಿಲ್ಲೆಯವರು ಒಂದು ಕ್ವಿಂಟಾಲ್ ಬಾಸುಮತಿ ಅಕ್ಕಿಯನ್ನು, ಸಂಗ್ರೂರ್ ಜಿಲ್ಲೆಯವರು ೧೦ ಕ್ವಿಂಟಾಲ್ ಗೋಧಿ ಹಿಟ್ಟನ್ನು ಒದಗಿಸಲಿದ್ದಾರೆ.

ನಿಧಿ ಸಂಗ್ರಹದಲ್ಲೂ, ಹೆಚ್ಚಿನ ಜಿಲ್ಲೆಗಳು ತಂತಮ್ಮ ಕೋಟಾ ಪೂರೈಸಿದ್ದಾರೆ. ಭಾಟಿಂಡಾ ಜಿಲ್ಲೆಯಲ್ಲಿ 13 ತಂಡಗಳಾಗಿ ಸಿಪಿಐ(ಎಂ) ಕಾರ್ಯಕರ್ತರು ವಿವಿಧ ಹಳ್ಳಿಗಳಲ್ಲಿ ನಿಧಿ ಸಂಗ್ರಹ ದೊಡನೆ ಮಹಾಧಿವೇಶನದ ಸಂದೇಶವನ್ನೂ ತಲುಪಿಸುತ್ತಿದ್ದಾರೆ. ತಹಸೀಲುವಾರಾಗಿ ನಾಲ್ಕು ಜಾಥಾಕ್‌ಗಳಾಗಿ ಧ್ವಜ ಸಂಚಲನ ನಡೆಸುತ್ತಿದ್ದಾರೆ.

ಜಾಲಂಧರ್‌ನಲ್ಲಿ ಜಿಲ್ಲೆಯೆಲ್ಲೆಡೆ ಸರ್ವಸದಸ್ಯ ಸಭೆಗಳು ನಡೆಯುತ್ತಿವೆ. ಬಾಂಗಾದ ದೋಆಬ್ ಸಾಂಸ್ಕೃತಿಕ ವೇದಿಕೆ ಜನಸಮೂಹಗಳ ಜಾಗೃತಿಗೆ ಬೀದಿ ನಾಟಕಗಳನ್ನು ಆಡುತ್ತಿದ್ದಾರೆ.

ಗುರುದಾಸ್‌ಪುರ್ ಜಿಲ್ಲೆಯಲ್ಲಿ 15 ತಂಡಗಳು ಮಹಾಧಿವೇಶನದ ಸಂದೇಶವನ್ನು ಗ್ರಾಮ-ಗ್ರಾಮಗಳಿಗೆ ತಲುಪಿಸುತ್ತಿವೆ.

ಭಾಂಟಿಂಡಾದಲ್ಲಿ ನಡೆದ ಒಂದು ದೊಡ್ಡ ಸಭೆಯಲ್ಲಿ ಕೃಷಿ ಕೂಲಿಕಾರರು ಈ ಮಹಾಧಿವೇಶನದ ಕೊನೆಯಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ. ಏಕೆಂದರೆ ಎಡಪಕ್ಷಗಳು ಮಾತ್ರ ತಮಗಾಗಿ ಹೋರಾಡುತ್ತಾರೆ, ಉಳಿದವರಿಗೆಲ್ಲಾ ತಾವು ನೆನಪಾಗುವುದು ಚುನಾವಣೆಗಳ ಸಮಯದಲ್ಲಿ ಮಾತ್ರ ಎಂದು ಅವರ ಅನುಭವ ಹೇಳುತ್ತಿದೆ.

ಚಂಡೀಗಢದಲ್ಲಿ

ಚಂಡೀಗಢದಲ್ಲಿ ಸಿಪಿಐ(ಎಂ) ಜಿಲ್ಲಾ ಘಟಕವಂತೂ ಸಿದ್ಧತಾ ಕೆಲಸಗಳಲ್ಲಿ ಭರದಿಂದ ತೊಡಗಿದೆ. ನಗರದಲ್ಲಿ ಆಗಲೇ ಗೋಡೆ ಬರಹಗಳು, ಕೆಂಪು ಪತಾಕೆಗಳು, ತಳಿರು ತೋರಣಗಳು ಮಹಾಧಿವೇಶನದ ಸಂದೇಶವನ್ನು ಸಾರಲಾರಂಭಿಸಿವೆ. ಕಾರ್ಯಕರ್ತರು ಮನೆ-ಮನೆಗೆ ಹೋಗುತ್ತಿದ್ದಾರೆ. ನಿಧಿ ಸಂಗ್ರಹದೊಂದಿಗೆ ಪಶ್ಚಿಮ ಬಂಗಾಳ ಕೈಗಾರಿಕಾ ನೀತಿ ಕುರಿತು ಕೇಂದ್ರ ಸಮಿತಿಯ ನಿರ್ಣಯವನ್ನು ಮನೆ-ಮನೆಗೆ ತಲುಪಿಸಲಾಗುತ್ತಿದೆ. ಸುತ್ತಮುತ್ತಲ ಹಳ್ಳಿಗಳಲ್ಲಿ ಸಿಪಿಐ(ಎಂ) ಮಹಾಧಿವೇಶನದ ಮಹತ್ವವನ್ನು ಬಿಂಬಿಸುವ ಬೀದಿ ನಾಟಕಗಳು ನಡೆಯುತ್ತಿವೆ. ಇದರಲ್ಲಿ ಪಂಜಾಬಿನ ಖ್ಯಾತ ನಾಟಕಗಾರ ಹಾಗೂ ನಿರ್ದೇಶಕ ಮತ್ತು ಪಂಜಾಬ್ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಗುರುಶರಣ್ ಸಿಂಗ್ ಸಕ್ರಿಯವಾಗಿ ನೆರವಾಗುತ್ತಿದ್ದಾರೆ.

14 ಹುತಾತ್ಮ ಜಾಥಾಗಳು

ದೇಶದ ಐಕ್ಯತೆ, ಸಮಗ್ರತೆಯನ್ನು ಕಾಪಾಡಲು ಖಾಲಿಸ್ತಾನಿಗಳ ಭಯೋತ್ಪಾದಕ ಕ್ರಮಗಳನ್ನು ಎದುರಿಸಿ ನಿಂತವರು ಪಂಜಾಬಿನ ಸಂಗಾತಿಗಳು. ಈ ಹೋರಾಟದಲ್ಲಿ 300 ಕ್ಕೂ ಹೆಚ್ಚು ಸಕ್ರಿಯ ಕಾರ್ಯಕರ್ತರು ಹುತಾತ್ಮರಾದರು. ಈ ಪ್ರತಿಯೊಬ್ಬ ಹುತಾತ್ಮರ ಊರುಗಳಿಂದ ಸಣ್ಣ ತಂಡಗಳು ಜಾಥಾಗಳಾಗಿ ಹೊರಟು 14 ಜಾಥಾಗಳಾಗಿ ಮಾರ್ಪಡುತ್ತವೆ. ಇದು ಸಿಪಿಐ(ಎಂ) ಇದುವರೆಗೆ ಪೂರೈಸಿದ ಹದಿನಾಲ್ಕು ಮಹಾಧಿವೇಶನಗಳ ಸಂಕೇತ. ಏಪ್ರಿಲ್ 3 ರಂದು ಈ ಎಲ್ಲಾ ಹುತಾತ್ಮ ಜಾಥಾಗಳು ಚಂಡೀಗಢ ತಲುಪುವವು. ಇಡೀ ರಾಜ್ಯವನ್ನು ಈ ಜಾಥಾಗಳು ಆವರಿಸಲಿವೆ.

ಮಹಾಧಿವೇಶನ ನಡೆಯುವ ಸ್ಥಳಕ್ಕೆ ಕಳೆದ ಮಹಾಧಿವೇಶನದ ಕೆಲವು ತಿಂಗಳುಗಳ ನಂತರವೇ ನಮನ್ನಗಲಿದ ಕಾಂ. ಎಂ. ಬಸವಪುನ್ನಯ್ಯನವರ ನೆನಪಿನಲ್ಲಿ ಬಸವಪುನ್ನಯ್ಯ ನಗರ ಎಂದು ಹೆಸರಿಡಲಾಗಿದೆ. ಮಹಾಧಿವೇಶನ ನಡೆಯುವ ಸಭಾಂಗಣಕ್ಕೆ ಕಾಂ. ಸತ್ವಂತ್ ಸಿಂಗ್ ರವರ ಹೆಸರಿಡಲಾಗುತ್ತದೆ.

300 ಸಂಗಾತಿಗಳು ೧೨ ಸಮಿತಿಗಳಲ್ಲಿ ಮಹಾಧಿವೇಶನಕ್ಕಾಗಿ ದುಡಿಯುತ್ತಿದ್ದಾರೆ. ಮಾರ್ಚ್ 17-18 ರಂದು ಈ ಸ್ವಯಂ ಸೇವಕರಿಗೆ ವಿಶೇಷ ಕ್ಯಾಂಪ್ ನಡೆಸಲಾಗುತ್ತಿದೆ. ಏಪ್ರಿಲ್ 8 ರ ಬಹಿರಂಗ ಸಭೆಯಲ್ಲಿ 2-3 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ.

ಮಹಾಧಿವೇಶನದ ಮೊದಲ ದಿನದಿಂದ ಹಿಡಿದು ಕೊನೆಯ ದಿನದವರೆಗೂ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಪಂಜಾಬಿನ ಹೊರಗಿನ ಇಪ್ಟಾ (ಪಶ್ಚಿಮ ಬಂಗಾಳ), ಜನನಾಟ್ಯ ಮಂಚ (ದಿಲ್ಲಿ) ತಂಡಗಳೂ ಭಾಗವಹಿಸಲಿವೆ. ಪಂಜಾಬಿ ಜಾನಪದ ನೃತ್ಯಗಳು, ಹಾಡುಗಳು, ನಾಟಕಗಳು ಈ ಕಾರ್ಯಕ್ರಮಗಳ ಪ್ರಮುಖ ಆಕರ್ಷಣೆಯಾಗಲಿವೆ. ★

ಕೇಂದ್ರದ ಬಜೆಟ್.....

ಪುಟ 1 ರಿಂದ

ಯೋಜನೆಗಳನ್ನಷ್ಟೇ ಮುಂದಿಟ್ಟಿದೆ. ಇದರಿಂದ ಜನ ವಿದ್ಯುತ್, ನೀರು, ರಸ್ತೆ ಹಾಗೂ ದೂರಸಂಪರ್ಕಗಳಿಗೆ ತೆರಬೇಕಾದ ಬೆಲೆ ಇನ್ನಷ್ಟು ಏರುತ್ತದೆ. ಈ ಸೌಲಭ್ಯಗಳನ್ನು ನಿರ್ಮಿಸುವಲ್ಲಿ ತೊಡಗಿಸಿದ ಹಣಕ್ಕೆ ಸಾಕಷ್ಟು ಪ್ರತಿಫಲ ದೊರೆಯಬೇಕೆಂಬ ಸಿದ್ಧಾಂತದಿಂದಾಗಿ ಹಣದುಬ್ಬರ ಇನ್ನಷ್ಟು ಹೆಚ್ಚುತ್ತದೆ. ಈ ಸೌಲಭ್ಯಗಳ ನಿರ್ಮಾಣದಲ್ಲಿ ಹಣ ತೊಡಗಿಸುವವರಿಗೆ ಐದು ವರ್ಷಗಳ ಕಾಲ ತೆರಿಗೆ ವಿನಾಯ್ತಿ ನೀಡಿ ಈ ಎಲ್ಲಾ ಸೌಲಭ್ಯಗಳಿಗೆ ಜನಗಳು ತೆರುವ ಬೆಲೆ ಹೆಚ್ಚುವಂತೆ ಸರಕಾರ ನೋಡಿಕೊಂಡಿದೆ ಎಂದು ಪೊಲಿಟ್ ಬ್ಯೂರೋ ಟೀಕಿಸಿದೆ. ಇಷ್ಟೇ ಅಲ್ಲ ಇದು ಇನ್ನೂ ಹಿಂಜರಿತದ ಹಿಡಿತದಿಂದ ಪೂರ್ಣ ಹೊರಬರಲಾಗದ ದೇಶೀ ಉದ್ದಿಮೆಗಳನ್ನು ಇನ್ನಷ್ಟು ತಟ್ಟುವುದು ಖಂಡಿತ ಎಂದು ಅದು ಅಭಿಪ್ರಾಯಪಟ್ಟಿದೆ.

ಹಣಕಾಸು ಮಂತ್ರಿಗಳು ಇಂತಹ ಕೈಗಾರಿಕಾ ಹಿಂಜರಿತವನ್ನು ಗಮನದಲ್ಲಿಟ್ಟುಕೊಂಡೇ ಹಲವಾರು ಸಾಮಗ್ರಿಗಳಿಗೆ ಅಬಕಾರಿ ಸುಂಕ ಇಳಿಸಿರುವುದು ಹಾಗೂ ಎಲ್ಲಾ ಭೋಗ ವಸ್ತುಗಳ ಆಮದನ್ನು ಮತ್ತಷ್ಟು ಉದಾರೀಕರಿಸುವುದು. **ಹೀಗೆ ಇಲ್ಲಿರುವ ಬೆಳವಣಿಗೆಯ ತಂತ್ರವೆಂದರೆ ಶ್ರೀಮಂತರ ಬಳಕೆ ವಸ್ತುಗಳಿಗೆ ಅವಕಾಶ ನೀಡುತ್ತಾ ದುಡಿಯುವ ಜನಗಳು ಹಾಗೂ ಬಡವರಿಗೆ ಸರಕಾರ ನೀಡಬೇಕಾದ ಭದ್ರತೆಯನ್ನು ಕೈಬಿಡುವುದು. ಇದರಿಂದ ಹಣಕಾಸು ಕೊರತೆ ಮತ್ತಷ್ಟು ಹೆಚ್ಚಿ ಹಣದುಬ್ಬರ ಇನ್ನಷ್ಟು ಏರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಪಿ.ಬಿ. ಎಚ್ಚರಿಸಿದೆ.**

ರಾಜಕೀಯ ಉದ್ದೇಶಗಳಿಗಾಗಿ ಇಂತಹ ಅಗ್ಗದ ಜನಪ್ರಿಯತೆ ಗಿಟ್ಟಿಸುವ ದಾರಿಯನ್ನು ಅಂಗೀಕರಿಸುವಾಗಲೇ ಕೇಂದ್ರ ಸರಕಾರ ಈ ಪ್ರಸ್ತಾಪಗಳ ಮೂಲಕ ರಾಜ್ಯಗಳ ಮೇಲೆ ತೀವ್ರ ಹಲ್ಲೆಯನ್ನು ಮಾಡಿದೆ ಎಂದು ಪಿ.ಬಿ. ಖೇದ ವ್ಯಕ್ತಪಡಿಸಿದೆ.

ಹಣಕಾಸು ಮಂತ್ರಿಗಳು ನೀಡಿರುವ ತೆರಿಗೆ ರಿಯಾಯಿತಿಗಳಿಂದ ರಾಜ್ಯಗಳಿಗೆ 808 ಕೋಟಿ ರೂ.ಗಳ ಆದಾಯ ನಷ್ಟವಾಗುತ್ತದೆ-ಅಂದರೆ ಕೇಂದ್ರಕ್ಕಾಗುವ ಆದಾಯ ನಷ್ಟಕ್ಕಿಂತಲೂ ಹೆಚ್ಚು, ಅತ್ತ ರಾಜ್ಯಗಳ ಯೋಜನಾ ಬಾಬ್ತುಗಳಿಗೆ ಬಜೆಟ್ಟಿನ ಬೆಂಬಲದಲ್ಲೂ ಹೆಚ್ಚಳವಿಲ್ಲ, ಇತ್ತ ತೆರಿಗೆ ಪಾಲಿನಲ್ಲೂ ಖೋತಾದಿಂದ ರಾಜ್ಯಗಳ ಆರ್ಥಿಕ ಚಟುವಟಿಕೆಗಳು ಇನ್ನಷ್ಟು ಸಂಕುಚಿತಗೊಳ್ಳುವಂತಾಗಿದೆ. ಈ ರೀತಿಯೂ ಜನಗಳ ಮೇಲೆ ತೆರಿಗೆ ಹೆಚ್ಚುತ್ತದೆ.

ಈ ರೀತಿ ಭಾರತವನ್ನು ಐಎಂಎಫ್‌ನ "ಸಂರಚನಾ ಹೊಂದಾಣಿಕೆ" ಕಾರ್ಯಕ್ರಮದ, ಉದಾರೀಕರಣದ, ಶ್ರೀಮಂತ ವಿಭಾಗಗಳಿಗೆ, ದೊಡ್ಡ ಕಂಪೆನಿಗಳಿಗೆ ರಿಯಾಯ್ತಿ ನೀಡುವ ಹಾದಿಯಲ್ಲಿ ಭಾರತವನ್ನು ಇನ್ನಷ್ಟು ಕೆಳಗೊಯ್ಯುತ್ತಾ ಸ್ವಾವಲಂಬನೆಯ ಹಾಗೂ ಸಾಮಾಜಿಕ ನ್ಯಾಯದ ಗುರಿಸಾಧನೆಯನ್ನು ಮತ್ತಷ್ಟು ಮೂಲೆಗೊತ್ತುವ ಒಂದು ಬಜೆಟ್ ದೇಶದ ಮುಂದಿದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಇದು ನಿಮಗೆ ಗೊತ್ತೆ?

● ನರಸಿಂಹರಾವ್ ಸರಕಾರ ದೇಶದ ಶೇ. ೭೦ರಷ್ಟು ಗ್ರಾಮೀಣ ಬಡವರಿಗೆ ಆಹಾರದ ಹಕ್ಕಿನ ಗ್ಯಾರಂಟಿ ನೀಡಿದೆಯಂತೆ. ಇದು ಈ ವರ್ಷದ ಜೋಕ್ ಎನ್ನುತ್ತೀರಾ? ಇಲ್ಲ, ಇತ್ತೀಚೆಗೆ ಕೋಪನ್‌ಹೇಗನ್ ನಲ್ಲಿ ನಡೆದ ಸಾಮಾಜಿಕ ಅಭಿವೃದ್ಧಿ ಕುರಿತ ವಿಶ್ವ ಶೃಂಗ ಸಮ್ಮೇಳನಕ್ಕೆ ಸಲ್ಲಿಸಿದ "ಭಾರತ ರಾಷ್ಟ್ರೀಯ ವರದಿ"ಯಲ್ಲಿ ಈ ಗುಟ್ಟು ಇದೆ.

● ರೇಶನ್ ಅಂಗಡಿಗಳಿಂದ ಜನರು ಖರೀದಿಸಿದ ಆಹಾರ 1991ರಿಂದ 1994ರ ನಡುವೆ ಅರ್ಧಕ್ಕಿಳಿಯಲು 44 ಲಕ್ಷ ಟನ್ ಕಮ್ಮಿಯಾಗಲು ಈ ಗ್ಯಾರಂಟಿಯೇ ಕಾರಣ ಎನಿಸಬಹುದೇ?

● ರಾವ್ ಸರಕಾರ ರೇಶನ್ ಅಂಗಡಿಗಳಲ್ಲಿ ಮಾರಲೆಂದು ದಾಸ್ತಾನಿಟ್ಟ ಧಾನ್ಯಗಳನ್ನು ಬಡವರಿಗೆ ಕೊಡುವುದಕ್ಕಿಂತಲೂ ಕಡಿಮೆ ದರದಲ್ಲಿ ನೇರವಾಗಿ ವ್ಯಾಪಾರಿಗಳಿಗೆ ಮಾರಲು ಆರಂಭಿಸಿದೆಯಂತೆ. ಈ ಗ್ಯಾರಂಟಿ ಜಾಸ್ತಿಯಾದುದರಿಂದಲೋ?

● ರಾವ್ ಸರಕಾರದ ಈ ವರದಿ ಬಡವರ ಸಂಖ್ಯೆ ಹಾಗೂ ಅನುಪಾತವನ್ನು ಅಂದಾಜು ಮಾಡಲು ತಜ್ಞರ ಗುಂಪು ರಚಿಸಿರುವುದಾಗಿಯೂ ಹೇಳಿದೆ-ತನ್ನ ಬಡವರ ಬಗ್ಗೆ ತನಗೆಷ್ಟು ಕನಿಕರವಿದೆ ಎಂದು ಪಾಶ್ಚಿಮಾತ್ಯ ದಾನಿಗಳಿಗೆ ತೋರಿಸಲಿಕ್ಕಾಗಿ ಇವೆಲ್ಲಾ ಎಂದು ಒಬ್ಬ ವೀಕ್ಷಕರ ಅಭಿಪ್ರಾಯ. ಅದಿರಲಿ, ಈ ತಜ್ಞರ ಅಂದಾಜಿನ ಪ್ರಕಾರ ಭಾರತದಲ್ಲಿ ಬಡತನದ ರೇಖೆಯ ಕೆಳಗೆ ಬದುಕುತ್ತಿರುವವರ ಸಂಖ್ಯೆ 31.1 ಕೋಟಿ. ಆದರೆ ರಾವ್ ಸರಕಾರದ ಈ ವರದಿಯ ಪ್ರಕಾರ 23.7 ಕೋಟಿ!

● ಮುಂದಿನ 60 ತಿಂಗಳಲ್ಲಿ ಅಪಾಯಕಾರಿ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವುದಿಲ್ಲ ಎಂದು ಈ ವರದಿ ಪಾಶ್ಚಿಮಾತ್ಯರಿಗೆ ಹೇಳುತ್ತಿದೆ. ಆದರೆ ನಿಜ ಸಂಗತಿಯೆಂದರೆ ಕೆಲವು ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ!

● "ಉಳುವವನೇ ಹೊಲದೊಡೆಯ" ಎಂಬುದು 1950ರಲ್ಲಿ ಆರಂಭಿಸಿದ ಭೂ ಸುಧಾರಣೆಗಳ ಮಾರ್ಗದರ್ಶಕ ಸೂತ್ರ ಎಂದು ಈ ವರದಿ ಶೃಂಗ ಸಮ್ಮೇಳನಕ್ಕೆ ಹೇಳುತ್ತದೆ. ನಿಜ ಸಂಗತಿಯನ್ನು ಹೇಳಬೇಕಾಗಿಲ್ಲವಲ್ಲ, ಇದುವರೆಗೆ ಈ ಸೂತ್ರದ ಪ್ರಕಾರ ಕಂಡುಬಂದ ಹೆಚ್ಚುವರಿ ಭೂಮಿಯನ್ನು ಹಂಚಿದ್ದು ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ಜಮ್ಮು ಕಾಶ್ಮೀರಗಳಲ್ಲಿ ಮಾತ್ರ-ಅದು ರಾಯರ ಪಕ್ಷದ ಆಡಳಿತವಿಲ್ಲದಿದ್ದಾಗ. ಈಗ ರಾಯರ ಪಕ್ಷ ಈ "ಮಾರ್ಗದರ್ಶಕ ಸೂತ್ರ"ಕ್ಕೆ ತಿಲಾಂಜಲಿ ನೀಡಲೂ ಹೇಸುತ್ತಿಲ್ಲ ಎಂದೂ ಈ ವರದಿ ಹೇಳಿಲ್ಲ-ಸಹಜವೇ ತಾನೇ!

● `2002ರ ವೇಳೆಗೆ ಭಾರತದಲ್ಲಿ ನಿರುದ್ಯೋಗವೆಂಬುದು ಸುಮಾರಾಗಿ ಇರಲಿಕ್ಕೇ ಇಲ್ಲ' ಎಂದೂ ವರದಿ ಹೇಳಿಕೊಂಡಿದೆ. 24 ಮುಂದುವರಿದ ದೇಶಗಳ ಎಲ್ಲಾ ನಿರುದ್ಯೋಗಿಗಳ ಸಂಖ್ಯೆಯನ್ನು ಕೂಡಿಸಿದರೂ ಭಾರತದಲ್ಲಿ ನಿರುದ್ಯೋಗಿಗಳ ಸಂಖ್ಯೆ ಅದಕ್ಕಿಂತ ಹೆಚ್ಚಾಗುತ್ತದೆ ಎಂದು ಕೋಪನ್ ಹೇಗನ್ ನಲ್ಲಿ ನೆರೆದಿದ್ದ ಪಾಶ್ಚಿಮಾತ್ಯ ಪ್ರತಿನಿಧಿಗಳಿಗೆ ತಿಳಿದಿರಲಿಕ್ಕಿಲ್ಲವೇ?

● ಈ ವರದಿಯ ಮತ್ತೊಂದು ನುಡಿಮುತ್ತು-ಗ್ರಾಮೀಣ ನೀರು ಪೂರೈಕೆ ಕಾರ್ಯಕ್ರಮದಲ್ಲಿ 'ಸಮಸ್ಯೆ'ಯಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೂರೈಕೆ ಉತ್ತಮಪಡಿಸಲಾಗುತ್ತಿದೆ. ನಿಜ ಸಂಗತಿಯೇನು? ಈ ಭೂಮಿಯ ಮೇಲೆ ಸಾಕಷ್ಟು ಕುಡಿಯುವ ನೀರು ದೊರೆಯದ ಪ್ರತಿ ಮೂವರಲ್ಲಿ ಒಬ್ಬ ಭಾರತೀಯ.

● ಕೊನೆಯದಾಗಿ ಮತ್ತೊಂದು ನುಡಿ ಮುತ್ತು-"ಆದಾಯ, ಉದ್ಯೋಗಗಳಲ್ಲಿನ ಬೆಳವಣಿಗೆಯ ಚಕ್ರದಿಂದ ಸಮಾಜದ ಬಡ ವಿಭಾಗಗಳು ಹೊರಗುಳಿಯುವ ಅಪಾಯವಿದೆ" ಎನ್ನುತ್ತದೆ ಈ ವರದಿ. ಇದು ಭಾರತದಲ್ಲಿ ರಾವ್ ಸರಕಾರದ "ಸುಧಾರಣೆ"ಯನ್ನು ಒಪ್ಪದವರು ಹೇಳುವ ಮಾತಿನಂತಿದೆಯಲ್ಲವೇ? ಇದು ತಿರಸ್ಕಾರಯೋಗ್ಯ ಟೀಕೆ ಎಂದು ಇದೇ ರಾವ್ ಸರಕಾರದ ವಕ್ತಾರರೇ ಭಾರತದಲ್ಲಿ ಹೇಳುತ್ತಿದ್ದಾರಲ್ಲವೇ?

● ಹಾಗಿದ್ದರೆ ಏಕೆ "ಭಾರತ ರಾಷ್ಟ್ರೀಯ ವರದಿ"ಯಲ್ಲಿ ಇವನ್ನೆಲ್ಲಾ ಹೇಳಲಾಗಿದೆ. "ಭಾರತ ನೀವು ಬಯಸುವುದನ್ನೆಲ್ಲಾ ಮಾಡುತ್ತಿದೆ-ಅಂತಹುದೇ ಇನ್ನಷ್ಟು ಮಾಡಲು ಸಿದ್ಧವಿದೆ-ನಮಗೆ ಇನ್ನಷ್ಟು ದುಡ್ಡು ಕೊಡಿ" ಎಂದು ಬೇಡಲು ಇವೆಲ್ಲಾ ನಾಟಕ ಎನ್ನುತ್ತಾರೆ ಒಬ್ಬ ತಜ್ಞ.